# ಅವ್ಯಂಗ್ ನಿರಾಶ್ರಿತರ & ವೃದ್ಧಾಶ್ರಮ

# AVYANG DESTITUTE & OLD AGE HOME

AVYANG FOUNDATION

## 2022-24



## ವರದಿ–2022–24




ವಿಳಾಸ : #660, ಆದಿತ್ಯ, ಕಾವೇರಿ ಲೇಔಟ್, ಹೆಚ್ ಎ ಫಾರಂ ಪೋಸ್ಟ್, ಮರಿಯಣ್ಣಪಾಳ್ಯ, ದಾಸರಹಳ್ಳಿ ಬೆಂಗಳೂರು–24

**E mail : avyangfoundation@gmail.com, website: www.avyang.org, Mob: 9035459524**





## ಅವ್ಯಂಗ್ ಕುರಿತು,

ಪ್ರಸ್ತುತ ಈ ಜಗತ್ತಿನಲ್ಲಿ ಜನರು ತಮ್ಮ ಆಸೆಗಳನ್ನು ಪೂರೈಸುವ ನಿಟ್ಟಿನಲ್ಲಿ ತಮ್ಮ ಜವಾಬ್ದಾರಿಗಳನ್ನು ಮರೆತು ತಾಂತ್ರಿಕ ಬದುಕನ್ನು ನಡೆಸುವ ಸಮಯದಲ್ಲಿ ಸಂಬಂಧಗಳನ್ನು ಮರೆತು ಅದರಲ್ಲೂ ಹಿರಿಯ ಜೀವಗಳನ್ನು ಕಡೆಗಣಿಸಿ ಈ ವೇಗದ ಜಗತ್ತಿನೊಂದಿಗೆ ಮುನ್ನುಗ್ಗುವಾಗ ತಮ ಜೊತೆ ಇರುವ ಹಿರಿಜೀವಗಳನ್ನು ಮರೆತು ಅವರನ್ನು ನಿರಾಶ್ರಿತರನ್ನಾಗಿಸಿ ಬೀದಿಗೆಳೆಯುತ್ತಾರೆ. ಇದರ ಜೊತೆಗೆ ಅನೇಕ ದಿನಗಳಿಂದ ಯಾವುದೇ ಸಂಬಂಧಿಕರಿಲ್ಲದೆ ತಮ್ಮವರನ್ನ ಕಳೆದುಕೊಂಡು ಅಸಹಾಯಕರಾಗಿ ಬೀದಿಯಲ್ಲಿ ವಾಸಿಸುವವರು ಇನ್ನೊಂದು ಕಡೆ.

ಇಂತಹ ನಾಗರಿಕರಿಗೆ, ಸಹಾಯಕರಾಗಿ, ಅವರ ಭಾವನೆಗಳಿಗೆ ಧ್ವನಿಯಾಗಿ, ಮಾನಸಿಕವಾಗಿ ಸ್ಫೂರ್ತಿಯಾಗಿ, ಅವರ ನೆತ್ತಿಗೆ ಸೂರಾಗಿ, ಹಸಿವಿಗೆ ಕೈತುತ್ತಾಗಿ, ದೈಹಿಕ ಆರೋಗ್ಯಕ್ಕೆ ಬೆಂಬಲವಾಗಿ, ಅವರ ಹೆಜ್ಜೆಗೆ ಹೆಜ್ಜೆಯಾಗಿ ಅವರ ಗೌರವಾನ್ವಿತ ಬದುಕಿಗಾಗಿ ಹೆಗಲು ಕೊಡಲು ಈ ಅವ್ಯಂಗ್ ಫೌಂಡೇಷನ್ ಅನ್ನು ಕಳೆದ 2022ರ ಮಾರ್ಚ್ ತಿಂಗಳಿನಲ್ಲಿ ಹುಟ್ಟುಹಾಕಲಾಯಿತು.

ಟ್ರಾನ್ಸ್ ಜೆಂಡರ್ ಆಗಿ ನಾವು ಅನುಭವಿಸಿದ ಸಂಬಂಧಗಳಿಲ್ಲದ ಅಸಹಾಯಕ ಜೀವನದ ನೋವನ್ನು ಯಾವ ಹಿರಿ ಜೀವಗಳು ಅನುಭವಿಸಬಾರದೆಂಬ ದೃಷ್ಟಿಯಿಂದ ಶ್ವೇತಾ ಹಾಗೂ ಅಶ್ವಿನಿ ರಾಜನ್‌ರವರ ನಾಯಕತ್ವದಲ್ಲಿ ಹಿರಿಯ ಜೀವಗಳು ನೆಮ್ಮದಿಯಿಂದ ತಮ್ಮ ಕೊನೆಯ ದಿನಗಳನ್ನು ಕಳೆಯಲು ಏಪ್ರಿಲ್ 2022ರಲ್ಲಿ 30 ಹಾಸಿಗೆಯುಳ್ಳ ವೃದ್ಧಾಶ್ರಮವನ್ನು **ಮರಿಯಣ್ಣಪಾಳ್ಯ – ದಾಸರಹಳ್ಳಿಯಲ್ಲಿ** ಸ್ಥಾಪನೆ ಮಾಡಲಾಗಿದೆ. ನಂತರ ಅಕ್ಟೋಬರ್ 2023ರಲ್ಲಿ 50 ಹಾಸಿಗೆ ಸಾಮರ್ಥ್ಯವುಳ್ಳ ಆಶ್ರಮವನ್ನು **ಮುರುಗಮಲ್ಲ,** ಚಿಂತಾಮಣಿ ತಾಲ್ಲೂಕು, ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ಪ್ರಾರಂಭಿಸಲಾಯಿತು. ಈ ವೃದ್ಧಾಶ್ರಮ ಕೇವಲ ಆಶ್ರಮವಾಗಿರದೆ, ನೊಂದ ಜೀವಗಳ ನೆಮ್ಮದಿ ತಾಣವಾಗಿದೆ. ಸುಂದರ ಪ್ರಕೃತಿಯ ಮನೆಯಾಗಿದೆ. ಮನೆ ಶೈಲಿಯ ದಕ್ಷಿಣ ಭಾರತ ಮಾದರಿ ಊಟದ ವ್ಯವಸ್ಥೆ, ಶುದ್ಧ ಕುಡಿಯುವ ನೀರು, ಸ್ನಾನಕ್ಕೆ ಬಿಸಿ ನೀರು, ಸುಸಜ್ಜಿತ ಗಾಳಿ, ವಿಶಾಲವಾದ ಮಲಗುವ ಕೊಠಡಿಗಳು, ಹಾಸಿಗೆ, ಹೊದಿಕೆ, ಔಷದೊಪಚಾರ, ಆರೋಗ್ಯ ವ್ಯವಸ್ಥೆ, ಭದ್ರತೆಗಾಗಿ ಸಿಸಿಟಿವಿ, ಎಲ್ಲದಕ್ಕಿಂತ ಹೆಚ್ಚಿನದಾಗಿ ಪ್ರೀತಿ ವಿಶ್ವಾಸದ ಮಾತು, ಆರೈಕೆಗಾಗಿ ಸಹಾಯಕರು, ನಗುಮುಖದಿಂದ ಸ್ಪಂದಿಸುವ ಸಿಬ್ಬಂದಿಗಳು ಇಲ್ಲಿರುವುದು ತುಂಬಾ ಸಂತಸಕರವಾಗಿದೆ.

ಸ್ವಯಂ ಸೇವಾ ಸಂಸ್ಥೆಗಳಲ್ಲಿ ಸೇವೆ ಸಲ್ಲಿಸಿ, ವಿವಿಧ ಸೇವಾಕ್ಷೇತ್ರಗಳಲ್ಲಿ ಪರಿಣಿತಿ ಪಡೆದಿರುವ ಹಾಗೂ ಟ್ರಾನ್ಸ್ ಜೆಂಡರ್ ನಿರಾಶ್ರಿತರ/ಹಿರಿಜೀವಿಗಳ ಸೇವೆ ಮಾಡಲು ಹಾಗೂ ಸಮಾಜದಲ್ಲಿ ಸಮಾಜದ ಕಟ್ಟಕಡೆ ವರ್ಗದ ಜನರ ಕಲ್ಯಾಣ ಮತ್ತು ಹಿರಿಯ ನಾಗರಿಕರ ಕಲ್ಯಾಣ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲು ನಿರ್ಗತಿಕರ,ವೃದ್ಧರ,ಮಹಿಳೆಯರ,ಮಕ್ಕಳ ಸಬಲೀಕರಣ, ಅರ್ಹ ಫಲಾನುಭವಿಗಳಿಗೆ ವಸತಿ,ಆಹಾರ, ಆರೋಗ್ಯ ನೀಡುವ ಗುರಿಯನ್ನು ಹೊಂದಿರುವ ಸಾಮಾಜಿಕ ಸಂಸ್ಥೆಯಾಗಿದೆ. ಭಾರತ ದೇಶದಲ್ಲಿ ಬಡತನ ನಿರ್ಮೂಲನೆಗಾಗಿ ಸಾಕಷ್ಟು ಯೋಜನೆಗಳನ್ನು ಜಾರಿಗೆ ತಂದು ಅನುಷ್ಟಾನಗೊಳಿಸುತ್ತಿದೆ. ಅಲ್ಲದೆ ವಸತಿ ಯೋಜನೆಗಳು ಸೇರಿದಂತೆ ಅನೇಕ ಸೌಲಭ್ಯಗಳನ್ನು ಕಲ್ಪಿಸಿದೆ. ಆದರೂ ದೇಶದಲ್ಲಿ ಉದ್ಯೋಗವನ್ನು ಹುಡುಕಿಕೊಂಡು ಹಳ್ಳಿಗಳಿಂದ ಪಟ್ಟಣಗಳಿಗೆ ವಲಸೆ ಬರುವವರ ಪ್ರಮಾಣ ಹೆಚ್ಚಾಗಿದೆ. ಭಾರತ ಹಿಂದಿನಿಂದಲೂ ಕೃಷಿ ಆಧಾರಿತ ದೇಶವಾಗಿದ್ದ, ಅಂತರ್ಜಲ ಕುಸಿತ, ನೀರಾವರಿ ಸಮಸ್ಯೆಗಳಿಂದಾಗಿ ಭಾರತದಲ್ಲಿ ಕೃಷಿ ಕ್ಷೀಣಿಸುತ್ತಿದ್ದು, ಜನರು ತಮ್ಮ ಜೀವನೋಪಾಯಕ್ಕಾಗಿ ನಗರಗಳಿಗೆ ವಲಸೆ ಬರುತ್ತಿದ್ದಾರೆ. ಈ ಎಲ್ಲ ಅಂಶಗಳನ್ನು ಮನಗೊಂಡು ನಿರಾಶ್ರಿತರ ಅಶ್ರಮವನ್ನು ಸ್ಥಾಪಿಸಲಾಗಿದೆ.

## ಸೇವಾ ಸೌಲಭ್ಯಗಳು

ನಮ್ಮ ಆಶ್ರಮದಲ್ಲಿ ಈ ಕೆಳಗಿನ ಸೇವೆಗಳನ್ನು ನಿರಾಶ್ರಿತರಿಗೆ ವೃದ್ಧರಿಗೆ, ಅಸಹಾಯಕರಿಗೆ ನೀಡುತ್ತೇವೆ.

ಉತ್ತಮ ವಾಸ ಸ್ಥಳ, ಮಲಗುವ ಕೊಠಡಿಗಳು. ಸುಸಜ್ಜಿತವಾದ ಅಡುಗೆ ಮನೆ ಮತ್ತು ಊಟದ ಕೊಠಡಿ, ನುರಿತ ಅಡುಗೆಯವರಿಂದ ಪೌಷ್ಟಿಕ ಮತ್ತು ಸಮತೋಲಿನ ಊಟದ ವ್ಯವಸ್ಥೆ, ವ್ಯವಸ್ಥಿತ ಶೌಚಾಲಯ ಮತ್ತು ಸ್ನಾನದ ಕೊಠಡಿಗಳು, ಬಿಸಿನೀರಿನ ವ್ಯವಸ್ಥೆ, ಧ್ಯಾನ, ಲಘು ವ್ಯಾಯಾಮ, ಕಾಲ್ನಡಿಗೆ, ಸಂಗೀತ,ಒಳಾಂಗಣ ಆಟಗಳು, ಟಿವಿ, ಮತ್ತು ದಿನ ಪತ್ರಿಕೆಗಳ ವ್ಯವಸ್ಥೆ, ಮಾಸಿಕ ವೈದ್ಯಕೀಯ ತಪಾಸಣೆ, ನಿರಂತರ ಆಪ್ತ ಸಮಾಲೋಚನೆ, ವ್ಯಕ್ತಿತ್ವ ವಿಕಸನ, ಹಾಗೂ ಮನೋರಂಜನಾ ಕಾರ್ಯಕ್ರಮಗಳು, ಕ್ರೀಯಾಶೀಲ ಚಟುವಟಿಕೆಗಳು, ಹಾಗೂ ಪ್ರವಾಸ ಕಾರ್ಯಕ್ರಮಗಳು, 24/7 ನರ್ಸಿಂಗ್ ಸೇವೆಗಳನ್ನು ಒದಗಿಸಲಾಗುತ್ತಿದೆ.





















## ಅವ್ಯಂಗ್ ಸೇವಾ ಯೋಜನೆ :



ಅವ್ಯಂಗ್ ಸಂಸ್ಥೆಯು ನಿರಾಶ್ರಿತರು/ವೃದ್ಧರು ಅಸಹಾಯಕರು ನೊಂದವರಿಗೆ ನೆಲೆಯಾಗಿ, ಅವರ ಹಸಿವಿಗೆ ಆಹಾರವಾಗಿ, ಅವರ ಅನಾರೋಗ್ಯಕ್ಕೆ ಆರೋಗ್ಯವಾಗಿ ಅವರ ಸೇವೆಗಾಗಿ, ಸಹೃದಯಿ ದಾನಿಗಳಿಂದ ಸಂಗ್ರಹಿಸಲ್ಪಟ್ಟ ಆಹಾರ, ಬಟ್ಟೆ,ಹೊದಿಕೆ, ಔಷಧಿ ಮೊದಲಾದವುಗಳನ್ನು ಅಸಹಾಯಕ ಪರಿಸ್ಥಿತಿಯಲ್ಲಿರುವ ವೃದ್ಧರಿಗೆ, ನಿರಾಶ್ರಿತರಿಗೆ, ನೀಡುವುದರ ಮೂಲಕ ಅವರ ಸೇವೆಯನ್ನು ಮಾಡುತ್ತಿದ್ದೇವೆ. ಇದರ ಜೊತೆಗೆ ಆರೋಗ್ಯ ಶಿಬಿರಗಳು, ರಾಷ್ಟ್ರೀಯ ಹಬ್ಬಗಳು, ಹುಟ್ಟು ಹಬ್ಬದ ಆಚರಣೆಗಳು, ವಿವಾಹ ವಾರ್ಷಿಕೋತ್ಸವ, ಪುನರ್ ವಸತಿ, ಅಂತ್ಯ ಸಂಸ್ಕಾರ, ಇನ್ನಿತರೆ ಆಚರಣೆಗಳನ್ನು ಸಾರ್ವಜನಿಕರು ನಮ್ಮ ಸಂಸ್ಥೆಯಲ್ಲಿ ಆಚರಿಸಿಕೊಂಡು ನಮ್ಮಲ್ಲಿರುವ ನಾಗರಿಕರಿಗೆ ಊಟದ ವ್ಯವಸ್ಥೆ ಮಾಡುತ್ತಿರುತ್ತಾರೆ. ಆರೋಗ್ಯಕರ ಹಾಗೂ ಪೌಷ್ಠಿಕ ಆಹಾರದ ವ್ಯವಸ್ಥೆಯನ್ನು ಪ್ರತಿನಿತ್ಯ ಮೂರು ಬಾರಿ ಉಚಿತವಾಗಿ ನೀಡಲಾಗುತ್ತಿದೆ. ಪ್ರತಿಯೊಬ್ಬರಿಗೂ ಪೌಷ್ಠಿಕ ಆಹಾರ ಬಹುಮುಖ್ಯ ಅದನ್ನು ಒದಗಿಸುವ ಕಾರ್ಯ ನಡೆಯುತ್ತಿದೆ. ಇದರ ಜೊತೆಗೆ ಆರೋಗ್ಯ ಸೇವೆಗಳನ್ನು ಒದಗಿಸಲಾಗುತ್ತಿದೆ.


















## ಅವ್ಯಂಗ್ ರಕ್ಷಣಾ ಕಾರ್ಯ





ಬೆಂಗಳೂರು ನಗರದಲ್ಲಿ ಅರೆಕಾಲದ ಉದ್ಯೋಗ, ಅವಶ್ಯವಿರುವಷ್ಟು ಗುಣಮಟ್ಟದ ಆಹಾರದ ಕೊರತೆ, ಶುದ್ಧ ಕುಡಿಯುವ ನೀರಿನ ಕೊರತೆ, ಶುದ್ಧ ಪರಿಸರವಿಲ್ಲದ ಜೀವನ ಇವೆಲ್ಲ ಕಾರಣಗಳಿಂದ ಹೆಚ್ಚಿನವರಿಗೆ ಕ್ಷಯ, ಶ್ವಾಸಕೋಶಕ್ಕೆ ಸಂಬಂಧಿಸಿದ ಖಾಯಿಲೆ, ಬೆನ್ನು ನೋವು, ಅಪೌಷ್ಟಿಕತೆ ಹೆಚ್ಚಾಗಿರುತ್ತದೆ. ಇವರಿಗೆ ರಾತ್ರಿ ವೇಳೆಯಲ್ಲಿ ಮಲಗಲು ವಸತಿ ವ್ಯವಸ್ಥೆ ಇರುವುದಿಲ್ಲ, ಹಾಗಾಗಿ ಇವರಿಗೆ ಆಕಾಶವೇ ಸೂರಾಗಿರುವ ತೆರೆದ ಸ್ಥಳಗಳಲ್ಲಿ ವಾಸಿಸುವುದರಿಂದ ಹೆಣ್ಣು ಮಕ್ಕಳು/ಮಹಿಳೆಯರು ಹಾಗೂ ಮಕ್ಕಳ ಮೇಲೆ ದೌರ್ಜನ್ಯಗಳು ಸಾಮಾನ್ಯ ರಾತ್ರಿಯಾದ ಮೇಲೆ ಅಲ್ಲಲ್ಲಿ ಕಾಣಸಿಗುವ ಈ ಜನರು ಸಮಾಜದ, ಸರ್ಕಾರದ ಕಣ್ಣಿಗೆ ಗೋಚರವಾಗುವುದೇ ಕಡಿಮೆ. ಇಂತವರನ್ನು ರಾತ್ರಿಯಲ್ಲಿ ಪತ್ತೆ ಹಚ್ಚಿ ನಮ್ಮ ಆಶ್ರಮಕ್ಕೆ ಸೇರಿಸಿಕೊಂಡು ಅವರ ಸಂಬಂಧಿಕರಿದ್ದರೆ ಅವರನ್ನು ಅವರ ಕುಟುಂಬಕ್ಕೆ ಸೇರಿಸಿರುತ್ತೇವೆ. ಒಟ್ಟಾರೆ ನಮ್ಮ ಸಂಸ್ಥೆಯಿಂದ ಇತರೆ ಸಂಘ ಸಂಸ್ಥೆಯ ಆಂಬ್ಯುಲೆನ್ಸ್ ಸಹಾಯ ಪಡೆದು 26 ಜನರನ್ನು ಬೀದಿ ಬದಿಯಿಂದ ರಕ್ಷಿಸಿದ್ದು ಅದರಲ್ಲಿ ಅವರ ಕುಟುಂಬಗಳನ್ನು ಹುಡುಕಿ ಅವರ ಕುಟುಂಬಗಳಿಗೆ ಸುರಕ್ಷಿತವಾಗಿ ಸೇರಿಸಲಾಗಿದೆ. ಹಾಗೂ ಇನ್ನೂ ಕೆಲವರು ನಮ್ಮಲ್ಲಿಯೇ ಆಶ್ರಯ ಪಡೆದಿದ್ದಾರೆ.






ಇವರ ಹೆಸರು ಯಶುವಸಂತ ಎಂದು ನಮ್ಮಲ್ಲಿ 2 ತಿಂಗಳಿನಿಂದ ನಮ್ಮ ಆಶ್ರಮದಲ್ಲಿದ್ದು ರಸ್ತೆಯಲ್ಲಿ ಅನಾಥವಾಗಿದ್ದವರನ್ನು ನಮ್ಮ ಆಶ್ರಮಕ್ಕೆ ಕರೆತಂದು ಅವರಿಗೆ ಆಶ್ರಯವನ್ನು ನೀಡಲಾಯಿತು. ಆದರೆ ಅವರ ಅನಾರೋಗ್ಯದ ನಿಮಿತ್ತ ಅವರನ್ನು ಆಟೋ ರಾಜ ಸಂಸ್ಥೆಗೆ ಕಳುಹಿಸಲಾಯಿತು ಆದರೆ ಚಿಕಿತ್ಸೆ ಫಲಕಾರಿಯಾಗದೆ ಅವರು ಮರಣ ಹೊಂದಿದರು. ಅಲ್ಲಿಯೇ ಅವರ ಅಂತ್ಯ ಸಂಸ್ಕಾರವನ್ನು ನೆರವೇರಿಸಲಾಗಿತು.




ಇದೆ ರೀತಿ ಡ್ರೀಮ್ ಇಂಡಿಯಾ ನೆಟ್‌ವರ್ಕ್ ಸಂಸ್ಥೆಯಿಂದ ನಮ್ಮ ಆಶ್ರಮಕ್ಕೆ ಅನೇಕ ನಿರಾಶ್ರಿತರನ್ನು ಸೇರಿಸಿರುತ್ತಾರೆ ಇದರ ಜೊತೆಗೆ ಅವರಿಗೆ ಆರೋಗ್ಯ ಸೇವೆಯನ್ನೂ ಹಾಗೂ ಔಷಧಿ, ಆಹಾರ ಪದಾರ್ಥಗಳು, ಹಾಸಿಗೆ, ಬಟ್ಟೆ, ಮಂಚಗಳನ್ನು ಉಚಿತವಾಗಿ ನೀಡಿದ್ದಾರೆ.



ಇದೇ ರೀತಿ ಪ್ರೋಜೆಕ್ಟ್ ಸ್ಮೈಲ್ ಸಂಸ್ಥೆಯಿಂದ ನಮ್ಮ ಆಶ್ರಮಕ್ಕೆ ಅನೇಕ ನಿರಾಶ್ರಿತರನ್ನು ಸೇರಿಸಿರುತ್ತಾರೆ ಇದರ ಜೊತೆಗೆ ಅವರಿಗೆ ಆರೋಗ್ಯ ಶಿಬಿರವನ್ನು ಹಾಗೂ ಔಷಧಿ, ಅವಶ್ಯಕವಿರುವಾಗ ಆಂಬ್ಯುಲೆನ್ಸ್ ಸೇವೆಯನ್ನು ಕೂಡ ಒದಗಿಸಿದ್ದಾರೆ.

## ಅವ್ಯಂಗ್ ರಕ್ಷಣಾ ಕಾರ್ಯ



ಹೀಗೆ ಅವ್ಯಂಗ್ ಸಂಸ್ಥೆ ರಸ್ತೆಯಲ್ಲಿರುವ ನಿರಾಶ್ರಿತರಿಗೆ ನೆಲೆಯಾಗುವ ನಿಟ್ಟಿನಲ್ಲಿ ಬೆಂಗಳೂರ ನಗರ ಹಾಗೂ ಚಿಂತಾಮಣಿ ತಾಲ್ಲೂಕು ಹಾಗೂ ಮುರುಗಮಲ್ಲದ ಸುತ್ತಮುತ್ತ ಸಮೀಕ್ಷೆ ಮಾಡಿ ಅಲ್ಲಿ ಇರುವ ಅಸಹಾಯಕ ನಿರಾಶ್ರಿತರನ್ನು ರಕ್ಷಣೆ ಮಾಡಿ ನಮ್ಮ ಆಶ್ರಮಕ್ಕೆ ಕರೆ ತಂದು ಅವರಿಗೆ ಚಿಕಿತ್ಸೆ ಹಾಗೂ ಊಟ,ವಸತಿ,ಬಟ್ಟೆ ಇನ್ನಿತರೆ ಅಗತ್ಯ ವಸ್ತುಗಳನ್ನು ನೀಡಿ ಅವರನ್ನು ಪೋಷಣೆ ಮಾಡಲಾಗುತ್ತಿದೆ. ಇದಕ್ಕೆ ಸಹಕಾರಿಯಾಗಿ ಪೋಲೀಸ್ ಇಲಾಖೆ, ಸಾರ್ವಜನಿಕರು ಹಾಗೂ ಸಂಘ–ಸಂಸ್ಥೆಗಳು ಕೈಜೊಡಿಸಿದ್ದಾರೆ. ಇದಕ್ಕಾಗಿ ಹೃದಯಪೂರ್ವಕ ಧನ್ಯವಾದಗಳು.



ಅವ್ಯಂಗ್ ಸ್ಥಾಪನೆಗೊಂಡಾಗಿನಿಂದ ಇದುವರೆಗೂ ಸುಮಾರು **28** ಜನ ನಿರಾಶ್ರಿತರನ್ನು ರಕ್ಷಣೆ ಮಾಡಿ ಅವರನ್ನು ನಮ್ಮ ಆಶ್ರಮ ಹಾಗೂ ಇತರೆ ಆಶ್ರಮಗಳಿಗೆ ಕಳುಹಿಸಿಕೊಟ್ಟಿರುತ್ತೇವೆ. ಹಾಗೂ ಕುಟುಂಬಗಳನ್ನು ಹುಡುಕಾಟ ಮಾಡಿ ಅವರ ಕುಟುಂಬಗಳಿಗೂ ಕೂಡ ನಾವು ಅವರನ್ನು ಕಳುಹಿಸಿಕೊಟ್ಟಿರುತ್ತೇವೆ.




ನಮ್ಮ ಸಂಸ್ಥೆಯು ಬೆಂಗಳೂರು ನಗರದಾದ್ಯಂತ ಸಂಚರಿಸಿ ಯಾರು ಅಸಹಾಯಕರಾಗಿ ರಸ್ತೆಯಲ್ಲಿ ವಾಸವಾಗಿರುತ್ತಾರೋ ಅವರನ್ನು ರಕ್ಷಣೆ ಮಾಡಿ ಅವರಿಗೆ ಅವಶ್ಯಕವಾಗಿರುವ ಆರೋಗ್ಯ ಸೇವೆ ಹಾಗೂ ಇನ್ನಿತರೆ ಸೇವೆಗಳನ್ನುಒದಗಿಸಲಾಗುತ್ತಿದೆ. ರಕ್ಷಣೆಯ ಸಮಯದಲ್ಲಿ ಸ್ಥಳೀಯ ಪೋಲೀಸ್ ಠಾಣೆಗೆ ಮಾಹಿತಿ ನೀಡಿ ಪೋಲೀಸ್ ಶಿಫಾರಸ್ಸಿಗೆ ಒಳಪಟ್ಟು ಪೋಲೀಸ್ ಪತ್ರದೊಂದಿಗೆ ಅವರನ್ನು ರಕ್ಷಿಸಲಾಗುತ್ತದೆ.











## ಅವ್ಯಂಗ್ ಪುನರ್ ವಸತಿ

ಅವ್ಯಂಗ್ ವೃದ್ಧಾಶ್ರಮ ಹಾಗೂ ನಿರಾಶ್ರಿತರ ಆಶ್ರಮದಲ್ಲಿ ಒಂದು ಮಹತ್ತರ ಕಾರ್ಯವನ್ನು ಮಾಡಿಕೊಂಡು ಬರುತ್ತಿದೆ ಅದು ಏನೆಂದರೆ ಯಾರು ಮನೆಯಿಂದ ಹೊರಗುಳಿದು ಬೀದಿಯಲ್ಲಿ ತಮ್ಮ ಜೀವನ ಕಳೆಯುತ್ತಿರುವವರನ್ನು ರಕ್ಷಣೆ ಮಾಡಿ ಅವರನ್ನು ಪೋಲಿಸ್ ಸಹಾಯದಿಂದ ಆಶ್ರಮಕ್ಕೆ ಕರೆ ತಂದು ಅವರಿಗೆ ಆರೈಕೆ ಮಾಡಿ ಅವರ ವಿಳಾಸ ಪಡೆದು ಅವರ ಕುಟುಂಬಕ್ಕೆ ಸೇರಿಸುವ ಮಹತ್ತರ ಕಾರ್ಯವನ್ನು ಮಾಡಿಕೊಂಡ ಬರುತ್ತಿದೆ. ಇದುವರೆಗೂ 22 ಜನ ನಿರಾಶ್ರಿತರನ್ನು ಅವರ ಕುಟುಂಬಕ್ಕೆ ಸೇರಿಸಲಾಗಿದೆ.ಶ್ರೀ ನಾಗರಾಜು ರವರು ರಾತ್ರಿ ವೇಳೆ ಜಿಕೆವಿಕೆ ಬಳಿತಿರುಗಾಡುತ್ತಿದ್ದಾಗ ಅಮೃತಹಳ್ಳಿ ಪೋಲೀಸ್ ಠಾಣೆಯ ಸಹಾಯದಿಂದ ಸ್ಥಳೀಯ ಯುವಕರು ನಮ್ಮ ಆಶ್ರಮಕ್ಕೆ ಸೇರಿಸಿದ್ದರೂ ಒಂದೇ ದಿನದಲ್ಲಿ ಅವರ ಸಂಬಂಧಿಕರನ್ನು ಪತ್ತೆ ಹಚ್ಚಿ ಅವರ ಕುಟುಂಬದವರೊಂದಿಗೆ ಕಳುಹಿಸಿಕೊಡಲಾಯಿತು.





ಅಮೃತಹಳ್ಳಿ ಕೆರೆಯೊಳಗಿನ ಕೆಸರಿನಲ್ಲಿ ಬಿದ್ದಿದ್ದ ಸುಬ್ರಹ್ಮಣ್ಯರವರನ್ನು ಹೋಂ ಗಾರ್ಡ್ ಪೋಲಿಸ್ ಸಹಾಯದಿಂದ ನಮ್ಮ ಆಶ್ರಮಕ್ಕೆ ಸೇರಿಸಿದ್ದರು, ಒಂದೇ ದಿನದಲ್ಲಿ ಬೆಂಗಳೂರಿನಲ್ಲಿದ್ದ ಅವರ ಕುಟುಂಬದೊಂದಿಗೆ ಕಳುಹಿಸಿಕೊಡಲಾಯಿತು.



ಅದೇ ರೀತಿ ರೆನಾಲ್ಡ್ ರವರು ಪ್ರಜ್ಞೆ ತಪ್ಪಿ ಹೆಬ್ಬಾಳದ ಬ್ಯಾಪ್ಟಿಸ್ಟ್ ಆಸ್ಪತ್ರೆಯ ಬಳಿ ಬಿದ್ದಿದ್ದಾಗ ಪೋಲಿಸರು ಆಶ್ರಮಕ್ಕೆ ಸೇರಿಸಿದ್ದರೂ ಅವರನ್ನೂ ಸಹ ಒಂದೇ ದಿನದಲ್ಲಿ ಅವರ ಸಹೋದರನ ಜೊತೆ ಕಳುಹಿಸಲಾಯಿತು.



ಇವರ ಹೆಸರು ರತ್ನಮ್ಮ ಇವರನ್ನು ನಮ್ಮ ಆಶ್ರಮಕ್ಕೆ ಕಾಟನ್‌ಪೇಟೆ ಪೋಲಿಸ್ ಠಾಣೆಯವ್ಯಾಪ್ತಿಯಲ್ಲಿ ರಕ್ಷಣೆ ಮಾಡಲಾಯಿತು. ಇವರಿಗೆ ಸುಮಾರು 97 ವರ್ಷ ಇವರು ನೀಡಿದ ಮಾಹಿತಿಯ ಮೇರೆಗೆ ಬನಶಂಕರಿ, 2ನೇ ಮುಖ್ಯರಸ್ತೆ, ಕಾವೇರಿನಗರ ಇಲ್ಲಿ ಹುಡುಕಿ ನಂತರ ಬನಶಂಕರಿ ಪೋಲಿಸ್ ಠಾಣೆಗೆ ಮಾಹಿತಿ ನೀಡಿ ಅಜ್ಜಿಯ ಕಡೆಯವರನ್ನು ಕರೆಸಿ ಅಜ್ಜಿಯನ್ನು ಅವರ ಕುಟುಂಬದವರ ಜೊತೆ ಕಳುಹಿಸಿಕೊಡಲಾಯಿತು.







## ಅವ್ಯಂಗ್ ಪುನರ್ ವಸತಿ





ಸತತ ಮೂರುವರೆ ವರ್ಷಗಳಿಂದ ಆಂದ್ರದಿಂದ ತಪ್ಪಿಸಿಕೊಂಡು ಬೆಂಗಳೂರಿನಲ್ಲಿ ಎಲ್ಲಾ ಬೀದಿಗಳಲ್ಲಿ ಜೀವನ ಸಾಗಿಸುತ್ತಾ ಒಂದು ಹೊತ್ತಿನ ಊಟವೂ ಕೂಡ ಇಲ್ಲದೆ, ಕೋವಿಡ್ ಪರಿಸ್ಥಿಯಲ್ಲೂ ಕೂಡ ಸಮಸ್ಯೆಗಳನ್ನು ಅನುಭವಿಸುತ್ತಾ ರಸ್ತೆ ಬದಿಯಲ್ಲಿದ್ದ ಶ್ರೀಮತಿ ಸರಸ್ವತಿಯವರನ್ನು ರಾತ್ರಿ ವೇಳೆ ಪೋಲೀಸ್ ಸಹಾಯದಿಂದ ರಕ್ಷಣೆ ಮಾಡಿ ಆಶ್ರಮಕ್ಕೆ ಕರೆ ತಂದು ಪೋಲೀಸ್ ಸಹಾಯದಿಂದ ಅವರ ಕುಟುಂಬವನ್ನು ಸಂಪರ್ಕಿಸಿ ಅವರಿಗೆ ಮಾಹಿತಿ ನೀಡಿ ಅವರ ಮಗ,ಸೊಸೆ ಹಾಗೂ ಕುಟುಂದವರನ್ನು ಕರೆಸಿ ಆ ತಾಯಿಯನ್ನು 24 ಗಂಟೆಯೊಳಗೆ ಆಕೆಯ ಕುಟುಂಬಕ್ಕೆ ಸೇರಿಸಿರುವುದು ಹೆಮ್ಮೆಯ ಕಾರ್ಯವಾಗಿದೆ. ಇದಕ್ಕೆ ಅಮೃತಹಳ್ಳಿ ಮತ್ತು ಆಂದ್ರ ಪೋಲಿಸ್ ಪ್ರಶಂಸೆ ವ್ಯಕ್ತ ಪಡಿಸಿದ್ದಾರೆ. ಈ ತಾಯಿ ಮನೆಗೆ ಸೇರೆ ಕುಟುಂಬದ ಜೊತೆ ಸಂತೋಷವಾಗಿರುವುದನ್ನು ಮಗ ತಮ್ಮ ಸೋಷಿಯಲ್ ಮೀಡಿಯಾದಲ್ಲಿ ಹಾಕಿಕೊಂಡಿದ್ದಾರೆ. ಕೊನೆಗೂ ಅನೇಕ ಕಷ್ಟ ನಷ್ಟಗಳ ನಡುವೆ ತಮ್ಮ ಆನಂದದ ಜೇನುಗೂಡಿನ ಕುಟುಂಬವನ್ನು ಮತ್ತೆ ಸೇರಿಕೊಡಿರುವುದು ಸಂತಸವಾಗಿದೆ.





ಇವರ ಹೆಸರು ಶ್ರೀಮತಿ ರಾಜಮ್ಮ ಮೂಲತಃ ಇವರು ಹಾಸನದವರು ಇವರು ಜಕ್ಕೂರಿನ ಬಳಿ ಅಮೃತಹಳ್ಳಿ ಪೋಲೀಸ್ ಠಾಣೆಯಿಂದ ರಕ್ಷಣೆ ಮಾಡಿ ನಮ್ಮ ಆಶ್ರಮಕ್ಕೆ ಸೇರಿಸಿದ್ದರು, ಮಾಸಿಕವಾಗಿ ಅಸ್ವಸ್ಥರಾಗಿದ್ದ ಇವರನ್ನು ಕಳೆದ 1 ವಾರದಿಂದ ಊಟ ವಸತಿ,ಆರೋಗ್ಯ ಸೇವೆಗಳನ್ನು ನೀಡುತ್ತಾ ನೋಡಿಕೊಂಡಿದ್ದೇವು, ಒಂದು ದಿನ ಅವರ ಮಾಹಿತಿಯನ್ನು ಪಡೆದು ಅರಸೀಕೆರೆ ಟೌನ್ ಪೋಲೀಸ್ ರವರಿಗೆ ಕರೆ ಮಾಡಿ ಮಾಹಿತಿಯನ್ನು ತಿಳಿಸಲಾಯಿತು. ಪೋಲೀಸ್ ರಾಜಮ್ಮನವರ ಕಡೆಯವರನ್ನೂ ಹಾಗೂ ಅವರ ಸಂಬಂಧಕರನ್ನು ಪತ್ತೆ ಹಚ್ಚಿ ಅವರ 3 ಜನ ಮಕ್ಕಳಿಗೆ ಕರೆ ಮಾಡಿ ಬೆಂಗಳೂರಿನ ನಮ್ಮ ಆಶ್ರಮಕ್ಕೆ ಕಳುಹಿಸಿದರು, ನಂತರ ಅವರುಗಳು ಆಶ್ರಮಕ್ಕೆ ಬಂದು ಅವರ ತಾಯಿಯನ್ನು ಅವರ ಮನೆಗೆ ಕರೆದುಕೊಂಡು ಹೋದರು.






## ಅವ್ಯಂಗ್ ಪುನರ್ ವಸತಿ




ಇವರು ದಾಮೋದರ್ ಮೂಲತಃ ಆಂಧ್ರಪ್ರದೇಶದವರು ಇವರು ಹೆಬ್ಬಾಳದ ಬಳಿ ಇರುವ ಟಾಟಾ ಮೋಟರ್ಸ್ ಮುಂಭಾಗದಲ್ಲಿ ಅಸಹಾಯಕರಾಗಿ ಪರದಾಡುತ್ತಿದ್ದವರನ್ನು ಅಮೃತಹಳ್ಳಿಯ ಪೋಲೀಸರನ್ನು ಸ್ಥಳಕ್ಕೆ ಕರೆಯಿಸಿಕೊಂಡು ಅವರನ್ನು ಪೋಲೀಸ್ ಠಾಣೆಗೆ ಕರೆದುಕೊಂಡು ಹೋಗಿ ಪೋಲೀಸ್ ಮೂಲಕ ನಮ್ಮ ಆಶ್ರಮಕ್ಕೆ ಸೇರಿಸಿಕೊಳ್ಳಲಾಯಿತು, ನಂತರ ಅವರಿಗೆ ಆರೋಗ್ಯ ಸರಿಯಿಲ್ಲದ ಕಾರಣ ಡ್ರೀಮ್ ಇಂಡಿಯಾ ನೆಟ್‌ವಕದ ಗ್ರೇಸ್ ಆಸ್ಪತ್ರೆಗೆ ಚಿಕಿತ್ಸೆಗಾಗಿ ಕಳುಹಿಸಿ ತದನಂತರ ನಮ್ಮ ಆಶ್ರಮಕ್ಕೆ ಕರೆಸಿಕೊಂಡು ಅವರ ಬಳಿ ಮಾಹಿತಿಯನ್ನು ಪಡೆದು ಅವರು ಇದ್ದ ಊರಿನ ಹತ್ತಿರದ ಪೋಲೀಸ್ ಠಾಣೆಗೆ ಕರೆಮಾಡಿ ಇವರ ಸಂಬಂಧಿಕರ ಮಾಹಿತಿ ಪಡೆದು ಅವರಿಗೆ ಕರೆ ಮಾಡಿ ತಿಳಿಸಲಾಯಿತು, ನಂತರ ಅವರ ಮಗ, ಹೆಂಡತಿ ಹಾಗೂ ಸಂಬಂಧಿಕರ ಜೊತೆಗೆ ಬಂದು ಅವರ ಬಗ್ಗೆ ಸಂಪೂರ್ಣ ಮಾಹಿತಿ ನೀಡಿ ಅವರನ್ನು ಕರೆದುಕೊಂಡು ಹೋದರು.











Avyang foundation- Destitute & Old age home

Get more reviews

Kaveri Layout, Mariyannapalya, Hebbal Kempapura, Bengaluru, Byatarayanapura CMC and OG Part, Karnataka

5.0 ★★★★★ 228 reviews

**hari babu**
4 reviews
★★★★★ a year ago

This is good foundation For helping Senior Citizens..One of the my Friend dad was missing on the date of 16th Aug 2022. We are Searching all ways to rescue operation but we don't find that man . This foundation can doing rescue operation his people's also searched then find the road and take him to foundation home .This people has to take caring that senior Man .This people can given Food and accommodation and medical allowance also ... Finally this is good foundation for Senior Citizens ...Thank you So Much For your Co- Operation

Reply 1

# ಅವ್ಯಂಗ್ ಪುನರ್ ವಸತಿ




ಶ್ರೀಮತಿ ಲಕ್ಷ್ಮಿ ಅಮ್ಮ ಇವರನ್ನು ಡ್ರೀಮ್ ಇಂಡಿಯಾ ನೆಟ್‌ವರ್ಕ್ ಸಂಸ್ಥೆಯಿಂದ ಸೆಪ್ಟೆಂಬರ್ 2022ರಲ್ಲಿ ನಮ್ಮ ಆಶ್ರಮಕ್ಕೆ ದಾಖಲು ಮಾಡಿದ್ದು ಇವರಿಗೆ ಇಬ್ಬರು ಮಕ್ಕಳಿದ್ದು ಚೆನ್ನೈನಲ್ಲಿ ವಾಸವಿದ್ದು, ಲಕ್ಷ್ಮಿ ಅಮ್ಮ ಅನಿವಾರ್ಯವಾಗಿ ತಪ್ಪಿಸಿಕೊಂಡು ಬೆಂಗಳೂರಿಗೆ ಬಂದಿರುತ್ತಾರೆ. ತದನಂತರ ಇವರೊಂದಿಗೆ ಸಮಾಲೋಚನೆ ಮಾಡಿ ಚೆನ್ನೈನ ಸ್ಥಳೀಯ ಪೋಲೀಸ್ ಠಾಣೆಗೆ ಮಾಹಿತಿ ನೀಡಿ ಅವರ ವಿಳಾಸ ಪತ್ತೆ ಹಚ್ಚಿ ಅವರ ಮಕ್ಕಳನ್ನ ಕರೆಸಿ ಪೋಲೀಸ್ ಠಾಣೆಯ ಮುಖಾಂತರ ಅವರನ್ನು ಮನೆಗೆ ಕಳುಹಿಸಲಾಯಿತು. ಇವರ ವಿಳಾಸವನ್ನು ಪತ್ತೆ ಹಚ್ಚಲು ತಡವಾಯಿತು ಕಾರಣ ಇವರ ಮಕ್ಕಳ ಯಾವುದೇ ರೀತಿಯ ಪೋಲೀಸ್ ಕೇಸ್ ದಾಖಲು ಮಾಡಿರಲಿಲ್ಲ.








ಶ್ರೀ ರಾಜುರವರು ಅಸಹಾಯಕರಾಗಿ ರಸ್ತೆ ಬದಿಯಲ್ಲಿ ಇದ್ದ ಇವರನ್ನು ರಕ್ಷಣೆ ಮಾಡಿ ಆಶ್ರಮಕ್ಕೆ ಕರೆತಂದು ಅವರಿಗೆ ಆರೋಗ್ಯ ಸೇವೆ, ಊಟ, ಬಟ್ಟೆ, ವಸತಿಯನ್ನು ನೀಡಿ ಕಳೆದ 5 ತಿಂಗಳಿನಿಂದ ನೋಡಿಕೊಳ್ಳುತ್ತಿದ್ದು, ಇವರ ಬಗ್ಗೆ ಸಾಮಾಜಿಕ ಜಾಲತಾಣಗಳಲ್ಲಿ ಪೋಟೋ & ವಿಡೀಯೋ ಹಂಚಿಕೊಂಡಿದ್ದು, ಜೊತೆಗೆ ಅವರ ಅಣ್ಣ ಮತ್ತು ಅಣ್ಣನ ಮಗ ಬಂದು ಕರೆದುಕೊಂಡು ಹೋಗಿದ್ದಾರೆ.


Avyang Foundation - Destitute & Old Age Home

C4QG+CP4, Makhan road, taluk, Chintamani, Murugamalla, Karnataka

5.0 ★★★★★ 10 reviews

Sort by

Most relevant | Newest | Highest | Lowest

deepak H
2 reviews
★★★★★ a week ago NEW


Felt really helpful by the organisation so that we got our uncle back after a long time search who was under the care of a yang old age murugumalla. very much thankfull to the organisation for there kind service.

Like



## ಅವ್ಯಂಗ್ ಪುನರ್ ವಸತಿ


ಶ್ರೀಮತಿ ಗ್ಯಾನಮ್ಮರವರು ಇವರು ಜಕ್ಕೂರು ಬಳಿ ಅಮೃತಹಳ್ಳಿ ಪೋಲಿಸ್ ಠಾಣೆ ಮುಖಾಂತರ ನಮ್ಮ ಆಶ್ರಮಕ್ಕೆ ಬಂದಿದ್ದು, ಇವರು ರಾಯಚೂರು ಮೂಲದವರು ಇವರ ಸಂಬಂಧಿಕರೊಂದಿಗೆ ಪೋಲಿಸ್ ಸಹಾಯದಿಂದ ಅವರನ್ನು ಅವರ ಕುಟುಂಬಕ್ಕೆ ಕಳುಹಿಸಿಕೊಡಲಾಯಿತು.









ಅವ್ಯಂಗ್ ನಿರಾಶ್ರಿತರ & ವೃದ್ಧಾಶ್ರಮದ ಮೂಲ ಉದ್ದೇಶ ನಿರಾಶ್ರಿತರನ್ನು ಕಾಪಾಡಿ ಅವರ ಕುಟುಂಬಕ್ಕೆ ಸೇರಿಸುವುದು. ಕುಟುಂಬದವರು ಪತ್ತೆಯಾಗದವರನ್ನು ನಮ್ಮ ಆಶ್ರಮದಲ್ಲಿ ಇರಿಸಿಕೊಂಡು ಅವರು ಗೌರವಾನ್ವಿತವಾಗಿ ಬದುಕಬೇಕೆಂಬ ಆಶಯದಿಂದ ಸೇವೆ ಮಾಡಿಕೊಂಡು ಬರುತ್ತಿದ್ದೇವೆ.

ಇದುವರೆವಿಗೂ ನಮ್ಮ ಆಶ್ರಮದಿಂದ ನಿರಾಶ್ರಿತರನ್ನು ಒಟ್ಟಾಗಿ **22** ಜನರನ್ನು ಆವರ ಕುಟುಂಬದವರಿಗೆ ಪುನರ್ ವಸತಿ ಮಾಡಿದ್ದೇವೆ.

1. ಶ್ರೀ ನಾಗರಾಜು–ಬೆಂಗಳೂರು, ಅಣ್ಣನ ಮಗ ಗೋಪಾಲಕೃಷ್ಣರ ಜೊತೆ ದಿನಾಂಕ: 28.01.2023
2. ಶ್ರೀಮತಿ ಸರಸ್ವತಿ – ಅನಂತಪುರಂ, ಆಂದ್ರ ಪ್ರದೇಶ–ಮಕ್ಕಳಾದ, ರಾಜೇಶ್, ದಿನೇಶ್,14.05.2022
3. ಲಲಿತಮ್ಮ– ಬೆಂಗಳೂರು, ಅಕ್ಕನ ಮಗಳು ಸಗಾಯ ಮೇರಿ, ದಿನಾಂಕ :3.12.2023.
4. ಶ್ರೀ ಸುಬ್ರಹ್ಮಣ್ಯ–ಕೊಡಿಗೆಹಳ್ಳಿ, ಬೆಂಗಳೂರು, ಮಗ ಮಣಿಕಂಠ, ದಿನಾಂಕ :21.05.2022
5. ಶ್ರೀ ರಂಗಪ್ಪ– ಗುಬ್ಬಿ, ತುಮಕೂರು, ಮಗ ತಿಮ್ಮಪ್ಪ, ದಿನಾಂಕ : ದಿನಾಂಕ : 08.09.2022
6. ರೆನಾಲ್ಡ್– ಅಣ್ಣ ಓವನ್ ಟ್ರೇವರ್ ಬೋಸೆನ್, ಬೆಂಗಳೂರು, ದಿನಾಂಕ : 24.05.2022
7. ಆನಂದ ಪ್ರಭು–ಬೆಂಗಳೂರು, ತಂದೆ ಸಂಪಂಗಿರಾಮ, ದಿನಾಂಕ: 07.09.2023
8. ಶ್ರೀಮತಿ ಅರಳಮ್ಮ – ಬೆಂಗಳೂರು, ಮಗಳು ಆಥೋನಿ ಮೇರಿ, ದಿನಾಂಕ :03.02.2023
9. ಶ್ರೀಮತಿ ರಾಜಮ್ಮ – ಅರಸೀಕೆರೆ,ಹಾಸನ,ಕುಪ್ಪಸ್ವಾಮಿ, ಪಾರ್ವತಿ,ಸರಸ್ವತಿ ಮಕ್ಕಳು ದಿನಾಂಕ: 20.08.2022
10. ಶ್ರೀ ದಾಮೋದರ್–ಬೆಂಗಳೂರು, ಮಗ ಜೀವರತ್ನಂ, ದಿನಾಂಕ : 24.08.2022
11. ಶ್ರೀ ವರಲಕ್ಷ್ಮಿ –ಬೆಂಗಳೂರು, ಗಂಡ ಲೋಕೇಶ್– ದಿನಾಂಕ :20.01.2022
12. ಶ್ರೀಮತಿ ಪ್ರಸನ್ನ ಕುಮಾರಿ– ಮಗ ವಿಶಾಲ್ ದಿನಾಂಕ :23.04.2023
13. ಶ್ರೀಮತಿ ಲಕ್ಷ್ಮಿ –ಚೆನ್ನೈ, ಮಗ ದಿನಾಂಕ : 24.03.2023
14. ಶ್ರೀಮತಿ ನಾಗಮ್ಮ– ಸಹಪೂರ,ಯಾದಗಿರಿ, ಮಗಳು ವಿಜಯಲಕ್ಷ್ಮಿ ದಿನಾಂಕ : 08.11.2022

## ಅವ್ಯಂಗ್ ಪುನರ್ ವಸತಿ

15. ಶ್ರೀಮತಿ ಶಾರದಮ್ಮ– ಬೆಂಗಳೂರು, ಮಗಳು ಪ್ರತಿಮ, ದಿನಾಂಕ : 05.01.2022
16. ಶ್ರೀಮತಿ ಶಿವಮ್ಮ – ಬೆಂಗಳೂರು, ಮಗ ಯೋಗೇಶ್, ದಿನಾಂಕ : 06.11.2023
17. ಶ್ರೀಮತಿ ಸರೋಜಮ್ಮ– ಅರಕೋಣಂ, ತಮಿಳುನಾಡು, ಮೊಮ್ಮಗ ಸತೀಶ್,ದಿನಾಂಕ: 16.12.2022
18. ಶ್ರೀ ಚನ್ನಿಗಪ್ಪ – ಬೆಂಗಳೂರು, ಮಗ,ಮಧು ಚಂದ್ರೇಗೌಡ, ದಿನಾಂಕ : 09.02.2023
19. ಪಳನಿಯಮ್ಮ – ಪಪ್ಪರಪಟ್ಟಿ, ತಮಿಳುನಾಡು, ಮಗಳು ಮಲ್ಲಿಕ, ದಿನಾಂಕ :14.04.2023
20. ಲಿಲ್ಲಿ ಕುಟ್ಟಿ– ಬೆಂಗಳೂರು, ಮಗ ಎಲಿಜಬೆತ್ ಅಥೋನಿ, ದಿನಾಂಕ : 19.12.2023
21. ಶ್ರೀಮತಿ ರತ್ನಮ್ಮ–ಬೆಂಗಳೂರು, ಮಗ,ಮೊಮ್ಮಗ, ದಿನಾಂಕ: 12.03.2024
22. ಶ್ರೀಮತಿ ಎಲಿಜಬತ್– ಬೆಂಗಳೂರು ಸ್ಟೀಫನ್,ದಿನಾಂಕ :15.03.2021

ಹೀಗೆ ವಿವಿಧ ಭಾಗಗಳಿಂದ ತಪ್ಪಿಸಿಕೊಂಡು ಬಂದವರನ್ನು ಅವರ ಮನೆಗಳಿಗೆ ತಲುಪಿಸುವ ಕಾರ್ಯವನ್ನು ಮಾಡುತ್ತಿದ್ದೇವೆ. ಈ ಕಾರ್ಯ ಎಲ್ಲಾ ವಿಭಾಗಗಳ ಪೋಲಿಸ್ ಇಲಾಖೆಯ ಸಿಬ್ಬಂದಿಗಳು ಸಹಕರಿಸುತ್ತಿರುವುದು ಬಹಳ ಸಂತೋಷದ ವಿಷಯವಾಗಿದೆ. ಹಾಗೂ ಹೆಚ್ಚಿನ ಚಿಕಿತ್ಸೆಗಾಗಿ **18 ಜನ** ನಿರಾಶ್ರಿತರನ್ನು ಬೇರೆ ಬೇರೆ ವೈದ್ಯಕೀಯ ಸೌಲಭ್ಯವಿರುವ ಆಶ್ರಮಗಳಿಗೆ ಕಳುಹಿಸಲಾಗಿದೆ.













## ಅವ್ಯಂಗ್ – ಆರೋಗ್ಯ ಸೇವೆ

ಅವ್ಯಂಗ್ ಫೌಂಡೇಷನ್ ಕೇವಲ ವೃದ್ಧಾಶ್ರಮ ಹಾಗೂ ನಿರಾಶ್ರಿತರ ಆಶ್ರಮವಲ್ಲದೆ, ಹಿರಿಯ ಆರೋಗ್ಯದ ದೃಷ್ಟಿಯಿಂದ ಎಲ್ಲಾ ಹಿರಿಯರಿಗೂ ಸಿಗಬೇಕಾದ ಆರೋಗ್ಯದ ಬಗ್ಗೆ ಗಮನ ಹರಿಸಿ ವಿವಿಧ ಸಂಸ್ಥೆಗಳ ಸಹಯೋಗದೊಂದಿಗೆ ಅವಶ್ಯಕವಿರುವ ಹಿರಿಯರಿಗೆ ಆರೋಗ್ಯ ತಪಾಸಣಾ ಶಿಬಿರವನ್ನು ಹಮ್ಮಿಕೊಂಡು ನೂರಾರು ಹಿರಿ ಜೀವಗಳಿಗೆ ರಕ್ತ ಪರೀಕ್ಷೆ ಮಾಡಿಕೊಡುವುದರ ಜೊತೆ ಅವಶ್ಯಕವಿರುವವರಿಗೆ ಆಸ್ಪತ್ರೆಗೆ ದಾಖಲು ಕಳುಹಿಸಲಾಗಿದೆ.









ಇದರ ಜೊತೆಗೆ ನಮ್ಮ ಆಶ್ರಮದಲ್ಲಿರುವ ಹಿರಿ ಜೀವಗಳಿಗೂ ಆರೋಗ್ಯ ಅತೀ ಮುಖ್ಯ ಆದಕಾರಣ ನಮ್ಮ ಆಶ್ರಮದಲ್ಲಿಯೂ ಕೂಡ ಆರೋಗ್ಯ ಶಿಬಿರದ ಮೂಲಕ ಪ್ರತಿ ತಿಂಗಳು ಆರೋಗ್ಯ ತಪಾಸಣೆ ಮಾಡಲಾಗುತ್ತಿದೆ.






ನಮ್ಮ ಆಶ್ರಮದಲ್ಲಿ ಕಣ್ಣಿನ ಸಮಸ್ಯೆ ಇದ್ದ ಮೂರು ಜನ ಹಿರಿಯರಿಗೆ ಪರೀಕ್ಷೆ ಮಾಡಿ ಅದರಲ್ಲಿ ಇಬ್ಬರಿಗೆ ಶಾರದ ಐ ಕೇರ್ & ಡೆಂಟಲ್ ಆರೋಗ್ಯ ಕೇಂದ್ರ ಸಹಯೋಗದೊಂದಿಗೆ ಪಿಸಿಎ ಚಾರಿಟಬಲ್ ಟ್ರಸ್ಟ್ ಕಡೆಯಿಂದ ಶಸ್ತ್ರಚಿಕಿತ್ಸೆ ಮಾಡಿಸಲಾಯಿತು.







## ಅವ್ಯಂಗ್ ಆರೋಗ್ಯ ಶಿಬಿರ

**"ಆರೋಗ್ಯವೇ ಭಾಗ್ಯ"** ಎಂಬ ಧ್ಯೇಯ ವಾಕ್ಯದೊಂದಿಗೆ ಹಿರಿಜೀವಗಳ ಆರೋಗ್ಯದ ಹಿತದೃಷ್ಟಿಯಿಂದ ನಮ್ಮ ಆಶ್ರಮದ ಸುತ್ತ ಮುತ್ತ ವಾಸವಾಗಿರುವ ಎಲ್ಲ ಹಿರಿಯ ಜೀವಗಳ ಆರೋಗ್ಯಕ್ಕಾಗಿ ಕಾಫಿಬೋರ್ಡ್ ಲೇಔಟ್ ಪಾರ್ಕ್‌ನಲ್ಲಿ ಮುತ್ತೂಟ್ ಸೇವಾಶ್ರಯ ಸಿಎಸ್‌ಆರ್ ಯೋಜನೆಯ ಸಹಯೋಗದೊಂದಿಗೆ ಬಿಪಿ, ಸಕ್ಕರೆ ಕಾಯಿಲೆ ಪರೀಕ್ಷೆ, ಹೆಚ್‌ಬಿಎಸ್‌ಎಜಿ ಒಳಗೊಂಡಂತೆ ಇನ್ನೂ ಅನೇಕ ರಕ್ತ ಪರೀಕ್ಷೆಯನ್ನು ಉಚಿತವಾಗಿ ಮಾಡಲು ಸುಮಾರು ಬೆಂಗಳೂರಿನಲ್ಲಿ 4 ಶಿಬಿರಗಳಲ್ಲಿ 445 ಜನರಿಗೆ ಹಾಗೂ ಚಿಂತಾಮಣಿಯ ನಗರ ಸಭೆಯ 126 ಪೌರಕಾರ್ಮಿಕರಿಗೆ ಹಾಗೂ ಮುರುಗಮಲ್ಲ ಅಮ್ಮ ಜಾನ್ ಬಾಬಾ ಜಾನ್ ದರ್ಗಾದಲ್ಲಿ 106 ಬತ್ತಲಪಲ್ಲಿ ದರ್ಗಾ ದಲ್ಲಿ 96 ಜನ ಶಿಬಿರದಲ್ಲಿ ಭಾಗವಹಿಸಿದ್ದರು ಮತ್ತು ಹೀಗೆ ನಿರಾಶ್ರಿತರ & ವೃದ್ಧಾಶ್ರಮದ ಜೊತೆಗೆ ಆರೋಗ್ಯ ಶಿಬಿರದಲ್ಲೂ ಕೂಡ ಕಾರ್ಯ ನಿರ್ವಹಿಸಲಾಗುತ್ತಿದೆ.





















# ಅವ್ಯಂಗ್ – ಮನೆ ಹಬ್ಬ



ಅವ್ಯಂಗ್ ವೃದ್ಧಾಶ್ರಮ ಮತ್ತು ನಿರಾಶ್ರಿತರ ಆಶ್ರಮವಾಗಿರದೇ ಮನೆಯ ವಾತಾವರಣ ರೀತಿಯಲ್ಲಿ ಎಲ್ಲರೊಂದಿಗೆ ಬೆರೆಯುವ ಕಾರ್ಯ ಹಾಗೂ ಎಲ್ಲಾ ರೀತಿ ಹಬ್ಬಗಳ ಆಚರಣೆ ಜೊತೆಗೆ ರಾಷ್ಟ್ರೀಯ ಹಬ್ಬಗಳು ಎಲ್ಲಾ ಧರ್ಮಗಳ ಒಳಗೊಂಡ ಹಬ್ಬಗಳನ್ನು ಆಚರಣೆ ಮಾಡಿ ಹಬ್ಬದ ವಾತಾವರಣವನ್ನು ನಮ್ಮ ಆಶ್ರಮದ ಹಿರಿಯಲ್ಲಿ ಮೂಡಿಸುತ್ತೇವೆ.








ಇದೇ ರೀತಿಯಾಗಿ ಸಹೃದಯಿ ದಾನಿಗಳು ತಮ್ಮ ಕುಟುಂಬಸ್ಥರ ಹುಟ್ಟುಹಬ್ಬ, ಮದುವೆ ವಾರ್ಷಿಕೋತ್ಸವ, ಪುಣ್ಯಸ್ಮರಣೆ, ಇಂತಹ ಹಲವು ಕಾರ್ಯಗಳನ್ನು ನಮ್ಮ ಆಶ್ರಮದಲ್ಲಿ ಆಚರಿಸಿಕೊಂಡು ನಮ್ಮ ಹಿರಿ ಜೀವಗಳಿಗೆ ಊಟದ ವ್ಯವಸ್ಥೆಯನ್ನು ಮಾಡಿ ಅವರ ಜೊತೆ ಸಮಯವನ್ನು ಕಳೆದು ಹೋಗುತ್ತಾರೆ ಈ ಸಂದರ್ಭದಲ್ಲಿ ಹಿರಿಯರು ಸಂತೋಷ ಪಡುತ್ತಾರೆ.ನಮ್ಮ ಆಶ್ರಮದ ಹಿರಿಯರಿಗೂ ಕೂಡ ಹುಟ್ಟಹಬ್ಬದ ಆಚರಣೆ ಮಾಡುತ್ತೇವೆ.















# ಅವ್ಯಂಗ್ – ಮನೆ ಹಬ್ಬ

ಕರ್ನಾಟಕದ ಪ್ರಮುಖ ಹಬ್ಬಗಳ ಸಾಲಿನಲ್ಲಿ ಮೊದಲ ಸಾಲಿನಲ್ಲಿ ನಮಗೆ ಕಾಣುವುದು **ದಸರಾ** ಈ ಹಬ್ಬವನ್ನು ಆಶ್ರಮದ ಎಲ್ಲಾ ಹಿರಿಯರೊಂದಿಗೆ ಕುಟುಂಬದ ರೀತಿಯಲ್ಲಿ ಆಚರಣೆ ಮಾಡಲಾಯಿತು.








ಅದೇ ರೀತಿಯಲ್ಲಿ ಬದುಕಿನ ಕತ್ತಲೆ ದೂರವಾಗಲಿ, ಜ್ಞಾನದ ಜ್ಯೋತಿ ಬೆಳಗಲಿ, ಎಲ್ಲರ ಮನೆ–ಮನಗಳಲ್ಲಿ ಶಾಶ್ವತವಾದ ಖುಷಿ ನೆಲೆಗೊಳ್ಳಲಿ,ದೀಪಗಳ ಹಬ್ಬವು ಎಲ್ಲರ ಬಾಳಿಗೆ ಹೊಸಬೆಳಕನ್ನು ತರಲಿ ಎಂಬುವ ಉದ್ದೇಶದಿಂದ ದೀಪಾವಳಿ ಹಬ್ಬವನ್ನು ಎಲ್ಲರಿಗೂ ಹೊಸ ಬಟ್ಟೆಗಳನ್ನು ನೀಡಿ, ಸಿಹಿ ಹಂಚಿ, ದೀಪಗಳನ್ನು ಬೆಳಗುವ ಮೂಲಕ ಆಚರಣೆ ಮಾಡಲಾಯಿತು.







## ಅವ್ಯಂಗ್ – ಮನೆ ಹಬ್ಬ

ನಮ್ಮ ಸಂಸ್ಥೆಯಲ್ಲಿ ಎಲ್ಲಾ ಧರ್ಮ ಧಾರ್ಮಿಕ ಆಚರಣೆಯನ್ನು ಮಾಡುತ್ತೇವೆ, ಅದರಲ್ಲಿ ಕ್ರಿಸ್ಮಸ್ ಹಬ್ಬವನ್ನೂ ಕೂಡ ಆಶ್ರಮದ ಎಲ್ಲಾ ಹಿರಿಯರ ಜೊತೆ ಅಲಂಕಾರದೊಂದಿಗೆ ಆಚರಣೆ ಮಾಡಿ ಸಿಹಿ ಸವಿಯಲಾಯಿತು. ಪ್ರಾರ್ಥನೆ ಸಲ್ಲಿಸಲಾಯಿತು.





ಇದೇ ರೀತಿಯಲ್ಲಿ ರಂಜಾನ್ ಹಬ್ಬವನ್ನು ಕೂಡ ಆಚರಣೆ ಮಾಡಲಾಯಿತು. ವಿಶೇಷ ಊಟದ ವ್ಯವಸ್ಥೆಯೊಂದಿಗೆ ಹಬ್ಬವನ್ನು ಸಂಭ್ರಮಿಸಲಾಯಿತು.





## ಅವ್ಯಂಗ್ – ಮನರಂಜನೆ

ಅವ್ಯಂಗ್ ವೃದ್ಧಾಶ್ರಮ ಹಾಗೂ ನಿರಾಶ್ರಿತರ ಆಶ್ರಮದಲ್ಲಿ ಊಟ, ವಸತಿ, ಆರೋಗ್ಯ ಸೇವೆ, ವ್ಯಾಯಾಮ, ಟಿವಿ, ಒಳಾಂಗಣ ಕ್ರೀಡೆಗಳ ಜೊತೆಗೆ ನೊಂದ ಮನಸ್ಸುಗಳಿಗೆ ನೆಮ್ಮದಿಯ ತಾಣವಾಗಿ ನಮ್ಮ ಆಶ್ರಮದಲ್ಲಿ ವಾತಾವರಣಗಳನ್ನು ನಿರ್ಮಾಣ ಮಾಡಲಾಗುತ್ತಿದೆ.













## ಅವ್ಯಂಗ್ – ದಾನಿಗಳು

ಅವ್ಯಂಗ್ ಫೌಂಡೇಷನ್ 2022 ನೇ ಸಾಲಿನಲ್ಲಿ ಪ್ರಾರಂಭಿಸಿದ್ದೇ ಆದರೂ ಆರಂಭದಲ್ಲಿ ಮುನ್ನಡೆಸಲು ಕಷ್ಟಗಳು ಸಾಲು ಸಾಲಾಗಿ ಬಂದಿದ್ದವು ಅದೇ ಸಮಯದಲ್ಲಿ **Baxter Innovations & Business Solutions Pvt Ltd,** ಸಂಸ್ಥೆಯಿಂದ **CSR initiatives** ಅಡಿಯಲ್ಲಿ 2022–23 ಮತ್ತು 2023–24 ಸಾಲಿಗೆ ಅನುದಾನವನ್ನು ನೀಡಿದ್ದು ಇದರ ಜೊತೆಗೆ ನಮ್ಮ ಆಶ್ರಮದ ನಿರಾಶ್ರಿತರ ವೈದ್ಯಕೀಯ ಸಾರಿಗೆ ವೆಚ್ಚಕ್ಕಾಗಿ ಆಂಬ್ಯುಲೆನ್ಸ್ ಅನ್ನು 2023–24 ಸಾಲಿನಲ್ಲಿ ಮಂಜೂರು ಮಾಡಿದ್ದಾರೆ. ಅವರ ತಂಡದ ಸದಸ್ಯರು ಕೂಡ ನಮ್ಮ ಆಶ್ರಮಕ್ಕೆ ಭೇಟಿ ನೀಡಿದ್ದರು.

Baxter





















## ಅವ್ಯಂಗ್ – ದಾನಿಗಳು

ಅವ್ಯಂಗ್ ವೃದ್ಧಾಶ್ರಮ ಹಾಗೂ ನಿರಾಶ್ರಿತರ ಆಶ್ರಮಕ್ಕೆ ಸ್ವಯಂ ಸೇವಕರಾಗಿ ಬರುತ್ತಿದ್ದ **Being Social- एक नई शुरुआत** ತಂಡದ ಸಹಕಾರದೊಂದಿಗೆ 2023–24 ನೇ ಸಾಲಿನಲ್ಲಿ **Trend Micro** ಸಂಸ್ಥೆಯ ವತಿಯಿಂದ CSR initiatives ಅಡಿಯಲ್ಲಿ ನಿರಾಶ್ರಿತರ ರಕ್ಷಣಾ ಕಾರ್ಯಕ್ಕಾಗಿ ಆಂಬ್ಯುಲೆನ್ಸ್ ಅನ್ನು ನೀಡಿದ್ದಾರೆ.























Being Social
एक नई शुरुआत




TREND MICRO™

# ಅವ್ಯಂಗ್ – ದಾನಿಗಳು

**Komastu** ಕಂಪನಿ ವತಿಯಿಂದ ಫ್ರಿಡ್ಜ್, ವಾಷಿಂಗ್ ಮೆಸಿನ್, ಮಂಚ, ಹಾಸಿಗೆ, ಪಾತ್ರೆಗಳು, ಟಿವಿ ಹೀಗೆ ಎಲ್ಲಾ ವಿಧವಾದ ವಸ್ತುಗಳನ್ನು ನೀಡುತ್ತಿದ್ದಾರೆ.


















## ಅವ್ಯಂಗ್ – ಚಿರಶಾಂತಿ

ಅವ್ಯಂಗ್ ವೃದ್ಧಾಶ್ರಮ ಹಾಗೂ ನಿರಾಶ್ರಿತರ ಆಶ್ರಮಕ್ಕೆ ಬಂದು ಆಶ್ರಯ ಪಡೆದ ಹಿರಿಯರಲ್ಲಿ ಅನೇಕ ದಿನಗಳಿಂದ ಆಶ್ರಯ,ವಸತಿ,ಊಟವನ್ನು ಪಡೆದು ಮನೆಯ ವಾತಾವರಣದಲ್ಲಿ ಬೆರೆತು ಒಂದೇ ಕುಟುಂಬದವರಂತೆ ಇದ್ದು ಅವರ ಅನಾರೋಗ್ಯದ ಕಾರಣ ನಮ್ಮ ಆಶ್ರಮದಲ್ಲಿ ಹಾಗೂ ಆಸ್ಪತ್ರೆಯಲ್ಲಿ ಒಟ್ಟು 6 ಜನ ಕೊನೆಯುಸಿರುಳೆದಿರುತ್ತಾರೆ ಹಾಗೂ ಅವರು ಅಂತಿಮ ಕಾರ್ಯವನ್ನು ಅವರ ಸಂಬಂಧಿಕರು ಮತ್ತು ಆಶ್ರಮದ ಸಮ್ಮುಖದಲ್ಲಿ ನೆರೆವೇರಿಸಲಾಗಿದೆ.





















## ಅವ್ಯಂಗ್ – ಸಮನ್ವಯತೆ




ಹೊಸದಾಗಿ ವೃದ್ಧಾಶ್ರಮ ಹಾಗೂ ನಿರಾಶ್ರಿತರ ಆಶ್ರಮವನ್ನು ಸ್ಥಾಪಿಸಿದ್ದೆ ಆದರೂ ನಮ್ಮ ಸಂಸ್ಥೆಯು ಈಗಾಗಲೇ ಕೆಲಸ ಮಾಡುತ್ತಿರುವ ಹೆಸರಾಂತ ಸಂಸ್ಥೆಗಳು ಸಂಸ್ಥಾಪಕರನ್ನು ಬೇಟಿ ಮಾಡಿ ನಮ್ಮ ಕಾರ್ಯಗಳ ಬಗ್ಗೆ ಚರ್ಚಿಸಿ ಅನೇಕ ಸಲಹೆ ಸೂಚನೆಗಳನ್ನು ಪಡೆದು ಸಂಸ್ಥೆಯ ಏಳಿಗೆಗೆ ಉನ್ನತ ಕಾರ್ಯ ಯೋಜನೆಗಳನ್ನು ರೂಪಿಸಲು ಸಲಹೆಯನ್ನು ಪಡೆಯಲಾಯಿತು. ಮೊದಲನೆದಾಗಿ ಡ್ರೀಮ್ ಇಂಡಿಯಾ ನೆಟ್‌ವರ್ಕ್ ಸಂಸ್ಥೆಯ ಫಾದರ್ ಎಡ್ವರ್ಡ್ ಥಾಮಸ್ ರವರನ್ನು ಭೇಟಿ ಮಾಡಿ ಸಲಹೆ ಸೂಚನೆಯನ್ನು ಪಡೆಯಲಾಯಿತು ಜೊತೆಗೆ ಅವರ ಅನೇಕ ಅವಶ್ಯಕ ವಸ್ತುಗಳನ್ನು ನಮ್ಮ ಆಶ್ರಮಕ್ಕೆ ನೀಡಿದ್ದಾರೆ.ಈ ಸಭೆಯಿಂದಾಗಿ ನಮ್ಮ ಸಂಸ್ಥೆಗೆ ಮಂಚ,ಟಿಪಾಯಿ, ಟೇಬಲ್, ಚೇರು, ಹಾಸಿಗೆ, ಹೊದಿಕೆ, ಹೀಗೆ ಹತ್ತು ಹಲವು ವಸ್ತುಗಳನ್ನು ಒದಗಿಸಿದ್ದಾರೆ.ಅವರಿಗೆ ನಮ್ಮ ಸಂಸ್ಥೆ ಆಭಾರಿಯಾಗಿರುತ್ತದೆ. ಈ ಮೂಲಕ ಅವರಿಗೆ ಧನ್ಯವಾದಗಳನ್ನು ತಿಳಿಸುತ್ತೇವೆ.ಇದೆ ರೀತಿ ಸಹಕಾರ ಹಾಗೂ ಸಲಹೆಗಳನ್ನು ಬಯಸುತ್ತೇವೆ.





ನಂತರ ಮತ್ತೊಂದು ಹೆಸರಾಂತ ಸಂಸ್ಥೆಯಾದ ಆಟೋ ರಾಜ(ಹೆಚ್ ಓ ಹೆಚ್) ಸಂಸ್ಥೆಗೆ ಭೇಟಿ ನೀಡಿ ನಿರಾಶ್ರಿತರ ಡ್ಯಾಡಿ ಎಂದೇ ಹೆಸರಾಗಿರುವ ಆಟೋ ರಾಜರವರನ್ನು ಭೇಟಿ ನೀಡಲಾಯಿತು. ಅವರು ಅವರ ಅನುಭವಿಸಿದ ಕಷ್ಟನಷ್ಟಗಳು ನಡೆದು ಬಂದ ದಾರಿಗಳನ್ನು ವಿವರಿಸಿದರು ಹಾಗೂ ಯಾವ ರೀತಿ ಆಶ್ರಮವನ್ನು ನೆಡಸಬೇಕೆಂದು ತಿಳಿಸಿದರು.



ಯಲಹಂಕ ವಲಯದ ಜಂಟಿ ಆಯುಕ್ತರಾದ ಶ್ರೀಮತಿ ಪೂರ್ಣಿಮ ಮೆಡಮ್ ರವರನ್ನು ಭೇಟಿ ನೀಡಲಾಯಿತು. ನಮ್ಮ ಆಶ್ರಮಕ್ಕೆ ಅವರನ್ನು ಆಹ್ವಾನ ಮಾಡಿ ಬಿಬಿಎಂಪಿ ಮೂಲಕ ನೀಡಬಹುದಾದ ಸಹಕಾರವನ್ನು ಮಾಡಲು ಕೋರಲಾಯಿತು. ನಮ್ಮ ಕಾರ್ಯಕ್ಕೆ ಮೆಚ್ಚುಗೆ ವ್ಯಕ್ತಪಡಿಸಿದರು.

## ಅವ್ಯಂಗ್ – ಸಮನ್ವಯತೆ

ಶ್ರೀಯುತ ಕೃಷ್ಣಭೈರೇಗೌಡರು, ಮಾನ್ಯ ಕಂದಾಯ ಸಚಿವರು, ಕರ್ನಾಟಕ ಸರ್ಕಾರ ಇವರನ್ನು ಭೇಟಿ ಮಾಡಿ ಆಶ್ರಮವನ್ನು ನಡೆಸಲು ಸರ್ಕಾರದ ಜಮೀನನ್ನು ಮಂಜೂರು ಮಾಡಿಕೊಡಲು ಅರ್ಜಿ ಸಲ್ಲಿಸಲಾಯಿತು. ಹಾಗೂ ಆಶ್ರಮದ ಮುಂಭಾಗ ರಸ್ತೆ ನಿರ್ಮಾಣ, ನೀರಿನ ವ್ಯವಸ್ಥೆಗೆ ಕೋರಿಕೆ ನೀಡಲಾಯಿತು. ಇದೇ ಸಂದರ್ಭದಲ್ಲಿ ನಮ್ಮ ಸಂಸ್ಥೆ ಕಾರ್ಯಕ್ರಮದ ಬಗ್ಗೆ ವಿವರಿಸಲಾಯಿತು.





ಶ್ರೀಯುತ ಶ್ರೀನಿವಾಸ್ ರವರು ಮಾನ್ಯ ಜಿಲ್ಲಾಧಿಕಾರಿಗಳು, ಬೆಂಗಳೂರು ನಗರ ಜಿಲ್ಲೆ ಇವರನ್ನು ಭೇಟಿ ಮಾಡಿ ಆಶ್ರಮವನ್ನು ನಡೆಸಲು ಸರ್ಕಾರದ ಜಮೀನನ್ನು ಮಂಜೂರು ಮಾಡಿಕೊಡಲು ಅರ್ಜಿ ಸಲ್ಲಿಸಲಾಯಿತು. ಇದೇ ಸಂದರ್ಭದಲ್ಲಿ ನಮ್ಮ ಸಂಸ್ಥೆ ಕಾರ್ಯಕ್ರಮದ ಬಗ್ಗೆ ವಿವರಿಸಲಾಯಿತು.



ಮಾನ್ಯ ವಸತಿ ಸಚಿವರಾದ ಜಮೀರ್ ಅಹಮ್ಮದ್ ರವರ ಕಛೇರಿಯಲ್ಲಿ ಅವರ ಆಪ್ತ ಸಹಾಯಕರನ್ನು ಭೇಟಿ ನೀಡಲಾಯಿತು.



ಸೌಮ್ಯ ರೆಡ್ಡಿರವರು, ಮಾಜಿ ಶಾಸಕರು,ಜಯನಗರ ಇವರನ್ನು ಭೇಟಿ ನೀಡಲಾಯಿತು, ಇದೇ ಸಂದರ್ಭ ಹಣಕಾಸಿ ಸಹಾಯವನ್ನು ಮಾಡಿದರು.



ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಹಿರಿಯ ನಾಗರೀಕ ಕಲ್ಯಾಣ ಮತ್ತು ಸಬಲೀಕರಣ ಇಲಾಖೆಯಿಂದ ನೋಂದಣಿ ಪ್ರಮಾಣ ಪತ್ರವನ್ನು ಪಡೆಯಲಾಯಿತು.

## ಅವ್ಯಂಗ್ – ಸಮನ್ವಯತೆ

ಶ್ರೀ ಗುರುಪ್ರಸಾದ್ ರವರು ಅಮೃತಹಳ್ಳಿ ಪೋಲೀಸ್ ಆರಕ್ಷಕ ನಿರೀಕ್ಷರು ಇವರನ್ನು ಭೇಟಿ ಮಾಡಿ ಆಶ್ರಮಕ್ಕೆ ದಾಖಲಾಗಿರುವ ನಿರಾಶ್ರಿತರ ಮಾಹಿತಿ ನೀಡಿ ಆಶ್ರಮದ ಕಾರ್ಯ ವೈಖರಿಯನ್ನು ವಿವರಿಸಲಾಯಿತು ಹಾಗೂ ಪೋಲೀಸ್ ಠಾಣಾ ವ್ಯಾಪ್ತಿಯಲ್ಲಿ ಸಿಗುವ ನಿರಾಶ್ರಿತರನ್ನು ಆಶ್ರಮಕ್ಕೆ ದಾಖಲು ಮಾಡಲು ತಿಳಿಸಲಾಯಿತು.





ಮಾನ್ಯತ ಟೆಕ್ ಪಾರ್ಕ್‌ನ ಕಂಪನಿಗೆ ಭೇಟಿ ಮಾಡಿ ಆಶ್ರಮದ ಬಗ್ಗೆ ನಿರಾಶ್ರಿತರ ಸೇವೆಯ ಬಗ್ಗೆ ಮಾಹಿತಿ ನೀಡಲಾಯಿತು.



ಹೊಸ ವರ್ಷದ ಪ್ರಯುಕ್ತ ವಿಕ್ಟರಿ ಇಂಟರ್ ನ್ಯಾಷನಲ್ ಎಜಿ ಚರ್ಚ್‌ಗೆ ನಮ್ಮ ಆಶ್ರಮದ ನಿರಾಶ್ರಿತರ ಜೊತೆಗೆ ಭೇಟಿ ನೀಡಲಾಯಿತು. ಚರ್ಚ್ ವತಿಯಿಂದ ಆಶ್ರಮಕ್ಕೆ ಹಣಕಾಸಿನ ಸಹಾಯ ಮಾಡಿದರು.







ಅಮೃತಹಳ್ಳಿ ಪೋಲಿಸ್ ಠಾಣೆಯ ಅಂಬರೀಶ್ ಸರ್ ಮತ್ತು ಸಿಬ್ಬಂದಿಗಳು ಹೊಸ ವರ್ಷದ ಆಚರಣೆ ಮಾಡಿ ಆಶ್ರಮಕ್ಕೆ ಸಹಾಯವನ್ನು ಮಾಡಿದರು.

## ಅವ್ಯಂಗ್ – ಸಮನ್ವಯತೆ

ಕೆಂಗೇರಿ ಅಪಾರ್ಟ್‌ಮೆಂಟ್ ರೆಸಿಡೆನ್ಸಿ ಅಸೋಸಿಯೆಷನ್ ವತಿಯಿಂದ ಆಶ್ರಮದ ಕಾರ್ಯ ವೈಖರಿಯನ್ನು ಸಾಮಾಜಿಕ ಜಾಲತಾಣಗಳಲ್ಲಿ ನೋಡಿ ಕನ್ನಡ ರಾಜ್ಯೋತ್ಸವಕ್ಕೆ ಮುಖ್ಯ ಅತಿಥಿಯಾಗಿ ಆಹ್ವಾನಿಸಿ, ಸನ್ಮಾನ ಮಾಡಿದ್ದಾರೆ.





ಅಮರ ಸಾಧಕಿಯರ ಸೇವಾ ಸಂಘದ ವತಿಯಿಂದ ಸಂಸ್ಥೆಯ ಮುಖ್ಯಸ್ಥರಾದ ಅರುಂಧತಿ ರವರು ಸನ್ಮಾನ ಮಾಡಿ ನಮ್ಮ ಕಾರ್ಯಕ್ಕೆ ಮೆಚ್ಚುಗೆ ವ್ಯಕ್ತಪಡಿಸಿದರು.








ಕರ್ನಾಟಕ ರಾಜ್ಯ ರೈತ ಸಂಘದ ವತಿಯಿಂದ ಕೋಲಾರದಲ್ಲಿ ನಡೆಸಿದ ಅಂತರಾಷ್ಟ್ರೀಯ ಮಹಿಳಾ ದಿನಾಚರಣೆ ಹಮ್ಮಿಕೊಂಡಿದ್ದು. ಈ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಭಾಗವಹಿಸಲಾಯಿತು.






ಕೌಸ್ತುನಾಥ್ ರವರು ಎನ್.ಎಸ್.ಡಿ.ಸಿ –ಇವರು ನಮ್ಮ ಆಶ್ರಮಕ್ಕೆ ಭೇಟಿ ನೀಡಿ ಸಲಹೆ ಸೂಚನೆಗಳನ್ನು ನೀಡಿದ್ದರು.




## ಅವ್ಯಂಗ್– ದತ್ತಾಂಶ

ಅವ್ಯಂಗ್ ಸಂಸ್ಥೆಯು ಈ ಕೆಳಗಿನ ಮೂಲಮಂತ್ರದೊಂದಿಗೆ ನಿರಾಶ್ರಿತರ & ಹಿರಿಯ ಗುಣಮಟ್ಟದ ಸೇವೆ ಮಾಡಿಕೊಂಡು ಬರುತ್ತಿದೆ.




ಅವ್ಯಂಗ್ ಫೌಂಡೇಷನ್–ನಿರಾಶ್ರಿತರ & ವೃದ್ಧಾಶ್ರಮದಲ್ಲಿ ಆಶ್ರಯ ಪಡೆದವರ ವಿವರಗಳು

| ವರ್ಷ | ಒಟ್ಟು ದಾಖಲಾತಿ ಪಡೆದವರು | ಪ್ರಸ್ತುತ ಆಶ್ರಮದಲ್ಲಿರುವವರು | ಪುನರ್ವಸತಿ ಹೊಂದಿದವರು | ಮರಣ ಹೊಂದಿದವರು | ಬೇರೆ ಸಂಸ್ಥೆ ಕಳುಹಿಸಿರುವವರು |
|---|---|---|---|---|---|
| 2022–23 | 42 | 19 | 9 | 3 | 13 |
| 2023–24 | 44 | 31 | 13 | 3 | 5 |
| ಒಟ್ಟು | 86 | 50 | 22 | 6 | 18 |



## ಅವ್ಯಂಗ್– ಸೇವೆ

ಅವ್ಯಂಗ್ ಫೌಂಡೇಷನ್–ನಿರಾಶ್ರಿತರ & ವೃದ್ಧಾಶ್ರಮದಲ್ಲಿ ನಡೆಯುವ ಚಟುವಟಿಕೆಗಳಲ್ಲಿ ಸೇವೆ ಎಂಬುದು ಅತಿ ಮುಖ್ಯವಾದುದ್ದು ಈ ನಿಟ್ಟಿನಲ್ಲಿ ಅನೇಕ ಸಂಘ ಸಂಸ್ಥೆಗಳು ಹಾಗೂ ಕಂಪನಿಗಳಿಂದ ಸ್ವಯಂಸೇವಕರಾಗಿ ನಮ್ಮ ಆಶ್ರಮಕ್ಕೆ ಬಂದು ಸಹಾಯ ಮಾಡುವುದರ ಜೊತೆಗೆ ಸೇವೆಯನ್ನು ಮಾಡಿರುತ್ತಾರೆ.
















## ಅವ್ಯಂಗ್– ಸೇವೆ

ಅವ್ಯಂಗ್ ಫೌಂಡೇಷನ್–ನಿರಾಶ್ರಿತರ & ವೃದ್ಧಾಶ್ರಮದಲ್ಲಿ ಪ್ರತಿ ಬಾರಿ ಸ್ವಯಂಸೇವಕರಾಗಿ    ರವರು ಬಂದು ಸೇವೆ ಮಾಡುತ್ತಾರೆ. ಇದರ ಜೊತೆಗೆ ಅವರು ನಮ್ಮ ಸಂಸ್ಥೆಗೆ ಸಹಾಯ ಮಾಡಲು ಬೇರೆಯವರಿಗೂ ಸಹ ತಿಳಿಸಿ ಅವರ ಕಡೆಯಿಂದ ಕೂಡ ಸಹಾಯ ಮಾಡಿಸಿರುತ್ತಾರೆ.






ವಿಟಿವಿಓ ಸ್ವಯಂಸೇವಕರು **"ಹಿರಿಯರ ಜಾತ್ರೆ"** ಎಂಬ ಕಾರ್ಯಕ್ರಮ ಮಾಡಿ ಎಲ್ಲಾ ವೃದ್ಧಾಶ್ರಮದ ಹಿರಿಯರನ್ನು ಒಂದೆಡೆ ಸೇರಿಸಿ ಮನರಂಜನೆ, ಕ್ರೀಡೆ, ಇನ್ನೆತರೆ ಹಲವು ಕ್ರಿಯಾತ್ಮಕ ಚಟುವಟಿಯನ್ನು ಮಾಡಿ ಹಿರಿಯರ ಸಂತೋಷಕ್ಕೆ ಕಾರಣೀಭೂತರಾದರು.











ನಮ್ಮ ಆಶ್ರಮದಲ್ಲಿ ಚಿಕ್ಕ ವಯಸ್ಸಿನ ಮಕ್ಕಳಿಂದ ಪದವಿ, ಸ್ನಾತಕೋತ್ತರ ಪದವಿಯ ಯುವಕರು ಕೂಡ ಭೇಟಿ ನೀಡಿ ಅವರ ಸೇವೆಯನ್ನ ಸಲ್ಲಿಸಿ ಹಿರಿಯರ ಖುಷಿಗೆ ಪ್ರಮುಖ ಪಾತ್ರ ವಹಿಸಿದ್ದಾರೆ. ಅವರೆಲ್ಲರಿಗೂ ಧನ್ಯವಾದಗಳು.

## ಅವ್ಯಂಗ್– ಸೇವೆ




**Motorola Solutions** ಕಂಪನಿಯಿಂದ ನಮ್ಮ ಆಶ್ರಮಕ್ಕೆ ಆಗಮಿಸಿದ ಸಿಬ್ಬಂದಿಗಳು ಆಶ್ರಮದ ಹಿರಿಯರ ಜೊತೆ ಸಮಯವನ್ನು ಕಳೆದು ದಿನಸಿ ಮತ್ತು ಊಟದ ವ್ಯವಸ್ಥೆಯನ್ನು ಮಾಡಿರುತ್ತಾರೆ.



**NielsenIQ** ಕಂಪನಿಯಿಂದ ನಮ್ಮ ಆಶ್ರಮಕ್ಕೆ ಆಗಮಿಸಿದ ಸಿಬ್ಬಂದಿಗಳು ಆಶ್ರಮದ ಹಿರಿಯರ ಜೊತೆ ಸಮಯವನ್ನು ಕಳೆದು ದಿನಸಿ ಮತ್ತು ಊಟದ ವ್ಯವಸ್ಥೆಯನ್ನು ಮಾಡಿರುತ್ತಾರೆ.











## ಅವ್ಯಂಗ್– ವೈದ್ಯಕೀಯ ಸೇವೆ




ವೈದ್ಯಕೀಯ ಸೇವೆ ಎಂಬುದು ಅನಿವಾರ್ಯವಾಗಿ ಬಂದು ಆಸ್ಪತ್ರೆಯಲ್ಲಿ ಚಿಕಿತ್ಸೆಯನ್ನು ಕೊಡಿಸಲಾಗುತ್ತದೆ. ಶ್ರೀಮತಿ ಶಕುಂತಲಮ್ಮ ಇವರಿಗೆ ಅಸ್ತಮ ಇದ್ದ ಕಾರಣ ತುಂಬಾ ಉಸಿರಾಟದ ತೊಂದರೆಯಾಗಿ ಅವರನ್ನು ಬೆಂಗಳೂರು ಬ್ಯಾಪ್ಟಿಸ್ಟ್ ಆಸ್ಪತ್ರೆಗೆ ದಾಖಲು ಮಾಡಲಾಗಿತ್ತು. ಚಿಕಿತ್ಸೆ ಫಲಕಾರಿಯಾಗದೆ ಕೊನೆಯುಸಿರೆಳೆದರು.

ವಿಕ್ಟರಿ ಇಂಟರ್ ನ್ಯಾಷನಲ್ ಚರ್ಚ್ ಕಡೆಯಿಂದ ಸಂಪೂರ್ಣ ಆಸ್ಪತ್ರೆಯ ವೆಚ್ಚವನ್ನು ಭರಿಸಿದ್ದೇ ಅಲ್ಲದೇ ಅವರ ಅಂತಿಮ ಸಂಸ್ಕಾರವನ್ನು ನೇರೆವೇರಿಸಿದರು.





ಇವರು ಲಕ್ಷ್ಮಿ ಅಮ್ಮ ಇವರಿಗೆ ಸಕ್ಕರೆಖಾಯಿಲೆ ಹಾಗೂ ಇವರಿಗೆ ಕಣ್ಣಿನ ಸಮಸ್ಯೆ ಇದ್ದು ಶುಗರ್ ಅತೀ ಹೆಚ್ಚಾದ ಕಾರಣ ಆಸ್ಪತ್ರೆಗೆ ದಾಖಲಿ ಮಾಡಲಾಯಿತು. ಶುಗರ್ ಸಮಸ್ಯೆಯಿಂದಾಗಿ ಮೆದುಳುಗೆ ಸ್ಟ್ರೋಕ್ ಆಗಿ ಅಂಗಾಗಗಳು ನಿಷ್ಕ್ರೀಯವಾಗಿ ಒಂದು ತಿಂಗಳು ಚಿಕಿತ್ಸೆ ಪಡೆದು ಚಿಕಿತ್ಸೆ ಫಲಕಾರಿಯಾಗದೆ. ನಿಧನ ಹೊಂದಿದರು.







ಅನಾರೋಗ್ಯ ಸಮಸ್ಯೆ ಕಾರಣ ಅವಶ್ಯಕವಿರುವವರನ್ನು ಸಂಗಮ ಮತ್ತು ಅಜೀಂ ಪ್ರೇಮ್‌ಜಿ ಫೌಂಡೇಷನ್ ಕ್ಲಿನಿಕ್ ಆರೋಗ್ಯ ಸೇವೆ ಯನ್ನು ನೀಡುತ್ತಿದ್ದಾರೆ.








ಅವ್ಯಂಗ್ ನಿರಾಶ್ರಿತರ & ವೃದ್ಧಾಶ್ರಮ
AVYANG DESTITUTE & OLD AGE HOME
Avyang foundation- Destitute & Old age home
5.0 ★★★★★ 201 reviews
Thank You!
200
GOOGLE REVIEWS
ನಿಮ್ಮ ಪ್ರೀತಿ, ವಿಶ್ವಾಸ, ಸಹಕಾರ ನಮಗೆ ಇನ್ನೂ ಸೇವೆ ಮಾಡಲು ಸ್ಫೂರ್ತಿಯಾಗಲಿದೆ.
@AvyangF
avyangfoundationoldagehome
+91 9035459524
avyang foundation-destitute & oldage home
www.avyang.org


ಅವ್ಯಂಗ್ ನಿರಾಶ್ರಿತರ & ವೃದ್ಧಾಶ್ರಮ
AVYANG DESTITUTE & OLD AGE HOME
avyangfoundationoldag...
410 Posts
1,039 Followers
Avyangfoundation Bangalore
THANK YOU
1K
Followers
@AvyangF
avyangfoundationoldagehome
+91 9035459524
avyang foundation-destitute & oldage home
www.avyang.org


With Love
Atharva Billava
We Make a Living By What We Get.
We Make a Life By What We Give
THANK YOU
ಅವ್ಯಂಗ್ ನಿರಾಶ್ರಿತರ & ವೃದ್ಧಾಶ್ರಮ
AVYANG DESTITUTE & OLD AGE HOME
ಧನ್ಯವಾದಗಳು,
BACHPAN
Play School & Day Care
Manyata Tech Park Campus
@AvyangF
avyangfoundationoldagehome
+91 9035459524
avyang foundation-destitute & oldage home
www.avyang.org


ಅವ್ಯಂಗ್ ನಿರಾಶ್ರಿತರ & ವೃದ್ಧಾಶ್ರಮ
AVYANG DESTITUTE & OLD AGE HOME
ನಮ್ಮ ಕುಟುಂಬ
@AvyangF
avyangfoundationoldagehome
+91 9035459524
avyang foundation-destitute & oldage home
www.avyang.org


ಅವ್ಯಂಗ್ ನಿರಾಶ್ರಿತರ & ವೃದ್ಧಾಶ್ರಮ
AVYANG DESTITUTE & OLD AGE HOME
ಬೆಂಗಳೂರಿನ ವಿವಿಧ ಭಾಗಗಳಲ್ಲಿ ದಿನಾಂಕ 02.01.2024ರ ರಾತ್ರಿ ಸಂಚಾರ ಮಾಡಿ ಚಳಿಯಲ್ಲಿ ಮಲಗಿದ್ದ ನಿರಾಶ್ರಿತರಿಗೆ ಆಶ್ರಮಕ್ಕೆ ಆಹ್ವಾನಿಸಲಾಯಿತು. ಆಶ್ರಮಕ್ಕೆ ಬರಲು ತಿರಸ್ಕರಿಸಿದವರಿಗೆ ಹೊದಿಯಲು 156 ಜನರಿಗೆ ರಗ್ಗುಗಳನ್ನು ವಿತರಿಸಲಾಯಿತು.
@AvyangF
avyangfoundationoldagehome
+91 9035459524
avyang foundation-destitute & oldage home
www.avyang.org


ಅವ್ಯಂಗ್ ನಿರಾಶ್ರಿತರ & ವೃದ್ಧಾಶ್ರಮ
AVYANG DESTITUTE & OLD AGE HOME
"A game of carrom is like a mental workout!"
@AvyangF
avyangfoundationoldagehome
+91 9035459524
avyang foundation-destitute & oldage home
www.avyang.org


ಅವ್ಯಂಗ್ ನಿರಾಶ್ರಿತರ & ವೃದ್ಧಾಶ್ರಮ
AVYANG DESTITUTE & OLD AGE HOME
We can do this together


ಅವ್ಯಂಗ್ ನಿರಾಶ್ರಿತರ & ವೃದ್ಧಾಶ್ರಮ
AVYANG DESTITUTE & OLD AGE HOME
Love
Care
Compassion


ಅವ್ಯಂಗ್ ನಿರಾಶ್ರಿತರ & ವೃದ್ಧಾಶ್ರಮ
AVYANG DESTITUTE & OLD AGE HOME
THANK YOU
LIKHITHA KOLLI

ಅವ್ಯಂಗ್ ನಿರಾಶ್ರಿತರ & ವೃದ್ಧಾಶ್ರಮ
AVYANG DESTITUTE & OLD AGE HOME


































## ಅವ್ಯಂಗ್ ಎರಡನೇ ಶಾಖೆಯ ಉದ್ಘಾಟನೆ

2023ರ ಅಕ್ಟೋಬರ್ ತಿಂಗಳಿನಲ್ಲಿ ಚಿಕ್ಕಬಳ್ಳಾಪುರ ಜಿಲ್ಲೆ, ಚಿಂತಾಮಣಿ ತಾಲ್ಲೂಕು, ಮುರುಗಮಲ್ಲದಲ್ಲಿ ನಮ್ಮ ಆಶ್ರಮದ 2ನೇಶಾಖೆಯನ್ನು ಉದ್ಘಾಟನೆ ಮಾಡಿ ಅಲ್ಲಿ ರಸ್ತೆ ಬದಿಯಲ್ಲಿ, ದರ್ಗಾದ ಬಳಿ, ಇನ್ನಿತರೆ ಪ್ರದೇಶಗಳಲ್ಲಿ ವಾಸ ಮಾಡುವ ನಿರಾಶ್ರಿತರಿಗೆ ಆಶ್ರಯ ನೀಡುವ ನಿಟ್ಟಿನಲ್ಲಿ ಕಾರ್ಯ ಪ್ರವೃತ್ತರಾಗಿದ್ದೇವೆ, ಬೆಂಗಳೂರಿನಲ್ಲಿ ದೊರಕುವ ಸೇವೆಗಳನ್ನು ಅಲ್ಲಿಯೂ ಕೂಡ ನೀಡಲು ಮುಂದಾಗಿದ್ದೇವೆ.



















**"ಇದ್ದಾಗ ಕಡೆಗಣಿಸಿ ಸತ್ತಾಗ ಅತ್ತು ಕರೆದರೆ ಮತ್ತೆ ಬರುವರಾ ಹೆತ್ತವರು"** ಈ ವಾಕ್ಯದಂತೆ ನಮ್ಮ ಹೆತ್ತವರನ್ನು ನಾವು ಗೌರವಿಸದಿದ್ದರೇ ಮತ್ತೆ ಯಾರು ಗೌರವಿಸುವರು ಹಾಗೂ ಅವರ ಭಾವನೆಗಳಿಗೆ ಬೆಲೆ ಕೊಡಬೇಕಾದ್ದು ನಮ್ಮ ಕರ್ತವ್ಯ ಹಾಗೂ ಅವರ ಮಾತುಗಳನ್ನು ಆಲಿಸಬೇಕಾದದ್ದು ನಮ್ಮದೇ ಜವಾಬ್ದಾರಿ ಆ ಕಾರಣದಿಂದ ನಮ್ಮ ನಮ್ಮ ಮನೆಗಳಲ್ಲಿ ಇರುವ ಹಿರಿಯರ ಮಾತುಗಳನ್ನು ಆಲಿಸಿ ಅವುಗಳ ಬಗ್ಗೆ ಗಮನ ಹರಿಸಬೇಕಾದದ್ದು ನಮ್ಮದೇ ಹೊಣೆಗಾರಿಕೆ.




ಸಣ್ಣ ಪುಟ್ಟ ಮಾತುಗಳಿಗೆ ಮನೆಯಿಂದ ಆಚೆ ಬಂದ ವಯಸ್ಸಾದ ವೃದ್ಧರು ಮನೆಗೆ ಹೋಗುವುದನ್ನೆ ಮರೆತು ರಸ್ತೆಗಳಲ್ಲಿ, ಉದ್ಯಾನವನಗಳಲ್ಲಿ, ಬಸ್ ನಿಲ್ದಾಣಗಳಲ್ಲಿ, ರೈಲು ನಿಲ್ದಾಣಗಳಲ್ಲಿ, ಉಳಿದು ಬಿಡುತ್ತಾರೆ. ಆಗ ನಿರಾಶ್ರಿತರಾಗಿ ಬಿಡುತ್ತಾರೆ. ಎಲ್ಲಾ ಸಂಬಂಧಗಳು ಇದ್ದೂ ಇವರು ನಿರಾಶ್ರಿತರು.

ಮತ್ತೊಂದು ಕಡೆ ಎಲ್ಲಾ ಸಂಬಂಧಿಕರು ಇದ್ದು ಅವರ ಹೆಸರಿನಲ್ಲಿದ್ದ ಆಸ್ತಿ, ಹಣ ಹಾಗೂ ಇತ್ಯಾದಿ ಕಾರಣಗಳಿಂದ ಅವರನ್ನು ಮನೆಯಿಂದ ಆಚೆ ಕಳುಹಿಸುವುದನ್ನು ಇತ್ತಿಚಿನ ದಿನಗಳಲ್ಲಿ ಇದು ಹವ್ಯಾಸವಾಗಿಬಿಟ್ಟಿದೆ. ಆದ ಕಾರಣ ಯಾವ ವ್ಯಕ್ತಿಯು ಸಹ ತಮ್ಮ ಮನೆಯಲ್ಲಿರುವ ಹಿರಿಯರನ್ನು ಗೌರಸಬೇಕು ಮತ್ತು ಅವರ ಮಾತಿಗೆ ಮನ್ನಣೆಯನ್ನು ನೀಡಬೇಕು ಅಗಿದ್ದಾಗ ಮಾತ್ರ ಎಲ್ಲಾ ಹಿರಿಯರು ಅವರವರ ಕುಟುಂಬದ ಸದಸ್ಯರ ಜೊತೆ ಸಂತೋಷವಾಗಿರುತ್ತಾರೆ.

ಪ್ರಸ್ತುತ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿ ಮತ್ತು ವಿದ್ಯಾರ್ಥಿನಿಯರಿಗೆ ಹಿರಿಯ ನಾಗರಿಕರನ್ನು ಅರ್ಥ ಮಾಡಿಕೊಳ್ಳುವ ಪಠ್ಯವನ್ನು ಇಟ್ಟರೆ ತಪ್ಪಾಗಲಾರದು, ಅದೇ ರೀತಿಯಲ್ಲಿ ಪ್ರಾಯೋಗಿಕವಾಗಿ ನಿರಾಶ್ರಿತರ ಹಾಗೂ ವೃದ್ಧಾಶ್ರಮಗಳಿಗೆ ಭೇಟಿ ನೀಡಿ  ಅಲ್ಲಿರುವ ಹಿರಿಯರ ಮನದಾಳದ ಮಾತುಗಳನ್ನು ಕೇಳಲು ಅವಕಾಶ ಮಾಡಿಕೊಡಬೇಕು ಜೊತೆಗೆ ಮುಂದಿನ ದಿನಗಳಲ್ಲಿ ಯಾವುದೇ ರೀತಿಯ ಆಶ್ರಮಗಳು ಇಲ್ಲದಿರುವುದು ನಮ್ಮ ನಾಗರಿಕರ ಮಾನವೀಯತೆಯನ್ನು ಬಿಂಬಿಸುವ ಮೈಲಿಗಲ್ಲಿಗೆ ಸಾಕ್ಷಿಯಾಗುತ್ತದೆ.

ಅವ್ಯಂಗ್ ನಿರಾಶ್ರಿತರ & ವೃದ್ಧಾಶ್ರಮ
AVYANG FOUNDATION
AVYANG DESTITUTE & OLD AGE HOME

## Google Review

SCAN ME

@AvyangF avyangfoundationoldagehome +91 9035459524
avyang foundation-destitute & oldage home www.avyang.org

ಅವ್ಯಂಗ್ ನಿರಾಶ್ರಿತರ & ವೃದ್ಧಾಶ್ರಮ
AVYANG FOUNDATION
AVYANG DESTITUTE & OLD AGE HOME

## Google Map/Locaton

@AvyangF avyangfoundationoldagehome +91 9035459524
avyang foundation-destitute & oldage home www.avyang.org

ಅವ್ಯಂಗ್ ನಿರಾಶ್ರಿತರ & ವೃದ್ಧಾಶ್ರಮ
AVYANG FOUNDATION
AVYANG DESTITUTE & OLD AGE HOME

## Facebook

@AvyangF avyangfoundationoldagehome +91 9035459524
avyang foundation-destitute & oldage home www.avyang.org

ಅವ್ಯಂಗ್ ನಿರಾಶ್ರಿತರ & ವೃದ್ಧಾಶ್ರಮ
AVYANG FOUNDATION
AVYANG DESTITUTE & OLD AGE HOME

## Instagram

AVYANGFOUNDATIONOLDAGEHOME

@AvyangF avyangfoundationoldagehome +91 9035459524
avyang foundation-destitute & oldage home www.avyang.org

# Organizational Information

| | |
|---|---|
| **Legal Name** | Avyang Foundation Trust |
| **Year of establishment** | 2021-22 |
| **Registration Address** | #1, Sree Mata Chamundeswari Nilaya, Kogilu, Srinivasapura,<br>Yalahanka, Bengaluru-560064 |
| **Office Address** | #660, Adhitya, Kaveri Layout, H.A.Farm Post Mariyannapalya, Dasarahalli, Bangalore-560024 |
| **Telephone Number** | +91 9035459524 |
| **Website** | www.avyang.org |
| **Email id** | avyangfoundation@gmail.com |
| **Type of Entity (Trust/Charity/section 25/ Others)** | Trust |
| **Government department/body where registered** | Department of stamps and registration, State of Karnataka |
| **Date of Registration** | 4th March 2022 |
| **Country of registration** | India |
| **Registration number** | YAN-4-00388-2021-22 |
| **Income Tax exemption** | Reg Under 12A : AAJTA0909RF202215<br>80G : AAJTA0909RF20221 |
| **CSR activities Reg Nu** | CSR00032431 |
| **PAN** | AAJTA0909R |
| **NGO Darphan** | KA/2022/0309718 |
| **Primary contact person at organization** | Ashwini Rajan +91 9035459524, +91 9611266089 |
| **Secondary contact person at organization** | Shwetha R +91 9686459299 |
| **Social Media** | FB: https://www.facebook.com/Avyang-Foundation-Old-Age-Home-101645132503013/<br>Insta : **avynagfoundation**<br>Twitter : **@AvyangF** |

AVYANG FOUNDATION

ಸಂವಿಧಾನದ 21ನೇ ಪರಿಚ್ಛೇದವು ಪ್ರತಿ ನಾಗರೀಕರಿಗೆ ಘನತೆ, ಗೌರವದಿಂದ ಬಾಳುವ ಹಕ್ಕು ಇರಬೇಕೆಂದು ಪ್ರತಿಪಾದಿಸುತ್ತದೆ. ಪರಿಚ್ಛೇದ 21ರ ಜೀವನ ಘನತೆಯ ವಿಷಯಕ್ಕೆ ಸಂಬಂಧಿಸಿದಂತೆ ನ್ಯಾಯಮೂರ್ತಿ ಶ್ರೀ ಭಗವತ ಜೆ. ಇವರು **"ಬಂಧುವಾ ಮುಕ್ತಿ ಮೋರ್ಚಾ ವರ್ಸ್‌ಸ್ ಯೂನಿಯನ್ ಆಫ್ ಇಂಡಿಯಾ"** ಪ್ರಕರಣದಲ್ಲಿ ವಿಸ್ತೃತ ವ್ಯಾಖ್ಯಾನವನ್ನು ಹೀಗೆ ನೀಡಿರುವರು. ಈ ದೇಶದ ಪ್ರತಿಯೊಬ್ಬರ ಮೂಲಭೂತ ಹಕ್ಕು – ಶೋಷಣೆಯಿಂದ ಮುಕ್ತವಾಗಿ ಘನತೆಯಿಂದ ಬದುಕುವುದು. ಅನುಚ್ಛೇದ 21 ರಲ್ಲಿ ಪ್ರತಿಪಾದಿಸಿರುವ ಮಾನವ ಘನತೆಯೊಂದಿಗೆ ಬದುಕುವ ಈ ಹಕ್ಕನ್ನು ರಾಜ್ಯ ನೀತಿಯ ನಿರ್ದೇಶನದ ತತ್ವಗಳು ಮತ್ತು ನಿರ್ಧಿಷ್ಟವಾಗಿ ಅನುಚ್ಛೇದ 39 ಮತ್ತು 41 ಮತ್ತು 42 ರ ಷರತ್ತುಗಳಿಂದ ಪಡೆಯಲಾಗಿದೆ. ಆದ್ದರಿಂದ ಕಾರ್ಮಿಕರು, ಪುರುಷರು ಮತ್ತು ಮಹಿಳೆಯರ ಆರೋಗ್ಯ ಮತ್ತು ಬಲದ ರಕ್ಷಣೆ, ಮಕ್ಕಳ ಮೇಲೆ ಸಂಭವಿಸಬಹುದಾಗ ದೌರ್ಜನ್ಯಗಳಿಂದ ರಕ್ಷಣೆ, ಮಕ್ಕಳು ಪೂರಕ ಮತ್ತು ಆರೋಗ್ಯಕರವಾಗಿ ಅಭಿವೃದ್ಧಿ ಹೊಂದಲು ಪೂರಕ ಪರಿಸರ, ಗೌರವ, ಘನತೆ, ಶೈಕ್ಷಣಿಕ ಸೌಲಭ್ಯಗಳು, ಪ್ರಸೂತಿಗೆ ಸಂಬಂಧಿಸಿದ ಸೌಲಭ್ಯಗಳು ನೀಡಬೇಕೆನ್ನುತ್ತದೆ. ಈ ಕನಿಷ್ಠ ಅವಶ್ಯಕತೆಗಳನ್ನು ಒದಗಿಸುವುದು ಸರ್ಕಾರದ ಜವಾಬ್ದಾರಿಯಾಗಿದೆ.





ಈ ಉದ್ದೇಶದಿಂದ ಅನೇಕ ಮಹಾನ್ ಕಾರ್ಯಗಳಿಗೆ ಮನಸೋತು ಸಾಮಾಜಿಕ ಕಳಕಳಿಯಿಂದ ಸಮಾಜದಿಂದ ತಳ್ಳಲ್ಪಟ್ಟ ಹಿರಿಯು, ನಿರಾಶ್ರಿತರಿಗೆ ಆಶ್ರಯ ಹಾಗೂ ಟ್ರಾನ್ಸ್‌ಜೆಂಡರ್ ಆಗಿ ಜನಸಾಮಾನ್ಯರಿಗೆ ಸೇವೆ ಮಾಡುವ ಹಿರ ದೃಷ್ಠಿಯಿಂದ ಈ ಆಶ್ರಮವನ್ನು ಸ್ಥಾಪಿಸಿ ಸೇವೆ ಸಲ್ಲಿಸಲಾಗುತ್ತದೆ, ಈ ಸೇವೆ ಎಲ್ಲಾ ವರ್ಗದವರು ಸಹಕರಿಸಿದರೆ ಇನ್ನೂ ಹಲವು ಕಾರ್ಯಗಳ ಮೂಲಕ ಸೇವೆ ಮಾಡಲು ಸ್ಪೂರ್ತಿಯಾಗುತ್ತದೆ, ದಯಮಾಡಿ ಸಹೃದಯಿ ದಾನಿಗಳು ತಮ್ಮಿಂದ ಆದ ಸಹಕಾರವನ್ನು ನೀಡಬೇಕಾಗಿ ವಿನಂತಿಸಿಕೊಳ್ಳುತ್ತೇವೆ.

ತಮ್ಮ ಸಹಾಯವನ್ನು ಡಿಜಿಟಲ್ ಸೇವೆಯ ಮೂಲಕ ತಿಳಿಸಬಹುದಾಗಿದೆ. ತಮ್ಮ ಸಹಕಾರದ ನಿರೀಕ್ಷೆಯಲ್ಲಿ ನಾವು ಕಾಯುತ್ತಿರುತ್ತೇವೆ.

## ತಮ್ಮ ಸಹಾಯವನ್ನು

ಬ್ಯಾಂಕ್ ಖಾತೆ ಸಂಖ್ಯೆ : 40873677297
ಐಎಫ್ಎಸ್‌ಸಿ ಕೋಡ್ : SBI0005191
ಬ್ರಾಂಚ್ ಹೆಸರು : ಸಹಕಾರನಗರ
ಬ್ಯಾಂಕ್ ಹೆಸರು : ಸ್ಟೇಟ್ ಬ್ಯಾಂಕ್ ಆಫ್ ಮೈಸೂರು

ಬ್ಯಾಂಕ್ ಖಾತೆ ಸಂಖ್ಯೆ : 079722010000520
ಐಎಫ್ಎಸ್‌ಸಿ ಕೋಡ್ : UBIN0907979
ಶಾಖೆಯ ಹೆಸರು : ಕಾಫಿ ಬೋರ್ಡ್ ಲೇಔಟ್
ಬ್ಯಾಂಕ್ ಹೆಸರು : ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾ

MERCHANT NAME: AVYANG FOUNDATION
UPI ID: 9035459524@SBI

